# ತ್ರೈಯೇಕತ್ವದ ಅಭ್ಯಾಸ

## ತಂದೆಯಾದ ದೇವರು (ಪರಲೋಕದ ದೇವರು)

ಭಾಗ – ೩

ಅಧ್ಯಯನ # 25



# ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

# ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 25

## ತ್ರೈಯೇಕತ್ವದ ಅಭ್ಯಾಸ

### ತಂದೆಯಾದ ದೇವರು (ಪರಲೋಕದ ದೇವರು)

**<u>ದಯವಿಟ್ಟು ಗಮನಿಸಿ:</u> ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.**

***ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.***

ಇಂದು ನಾವು ತ್ರೈಯೇಕತ್ವದ ಮೂರನೇ ಭಾಗವನ್ನು ಅಭ್ಯಾಸ ಮಾಡುವುದಕ್ಕೆ ಮುಂಚೆ ಕಳೆದ ತರಗತಿಯಲ್ಲಿ ಏನೇನು ಕಲಿತೆವೆಂದು ನೆನಪಿಸಿಕೊಂಡು ಆರಂಭಿಸೋಣ–

ಏನೆಂದರೆ, ತ್ರೈಯೇಕತ್ವವನ್ನು ಕುರಿತ "ಹೆಸರಾಂತ" ಕ್ರೈಸ್ತ ಬೋಧನೆಯನ್ನು ಸತ್ಯವೇದವು ಬೋಧಿಸುವುದಿಲ್ಲ ಮತ್ತು ಅದು **"ದೆವ್ವದ ಬೋಧನೆಗಳ"** ಒಂದು ಭಾಗವಾಗಿದೆ. **(1 ತಿಮೊಥೆಯನಿಗೆ 4:1 )**

ಮುಂದೆ, ಪವಿತ್ರಾತ್ಮವನ್ನು ಕುರಿತು ಅಭ್ಯಾಸ ಮಾಡಿದಾಗ ಪ್ರಕಟವಾದದ್ದೇನೆಂದರೆ, ಸತ್ಯವೇದವು ನಮಗೆ ಕಲಿಸುವುದೇನೆಂದರೆ ಪವಿತ್ರಾತ್ಮವು "ಮೇಲಣ ಲೋಕದ ಶಕ್ತಿ" ಎಂದು ಯೇಸು ಬೋಧಿಸುವುದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ–

**ಲೂಕ 24:49**


**"ಇಗೋ ನನ್ನ ತಂದೆಯು ವಾಗ್ದಾನಮಾಡಿದ್ದನ್ನು ನಿಮಗೆ ಕಳುಹಿಸಿಕೊಡುತ್ತೇನೆ. ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದುಕೊಂಡಿರ್ರಿ ಎಂದು ಹೇಳಿದನು."**

**ಹೌದು ! ಪವಿತ್ರಾತ್ಮವು ದೇವರ ಶಕ್ತಿಯಾಗಿದೆ ಮತ್ತು ಒಬ್ಬ ವ್ಯಕ್ತಿ ಅಥವಾ ಒಬ್ಬ ದೇವರಲ್ಲ!**

ಇನ್ನೂ ನಾವು ದೇವರ ಮಗನನ್ನು ಕುರಿತು ಅಭ್ಯಾಸ ಮಾಡುವಾಗ ಪ್ರಕಟವಾದದ್ದೇನೆಂದರೆ ಆತನೇ ದೇವರ **ಮೊದಲ ನೇರವಾದ ಸೃಷ್ಟಿ ಮತ್ತು ಆತನೊಬ್ಬನೇ ಈ ರೀತಿಯ ದೇವರ ನೇರವಾದ ಸೃಷ್ಟಿಯಾಗಿರುವವನು** **(ಪ್ರಕಟಣೆ 22:13)** ಮತ್ತು ಈತನೇ ದೇವರ ಮಹಿಮೆಯಾಗಿದ್ದಾನೆ! **(ಯೋಹಾನ 1:14)** ಆತನು ದೇವರ ಜೊತೆ ಸಹ ಸೃಷ್ಟಿ ಕರ್ತನು ಮತ್ತು ದೇವರ ಪ್ರತಿನಿಧಿ ಮತ್ತು "**ಕರ್ತನ ದೂತನು**".

ಆತನನ್ನು ಪರಲೋಕದಲ್ಲಿ ಪ್ರಧಾನ ದಿವ್ಯ ಪಾಲಕನಾದ ಮೀಕಾಯೇಲನು ಎಂದು ಕರೆಯಲಾಗುತ್ತಿತ್ತು ಮತ್ತು.....ಆತನು ತಂದೆ ದೇವರ "ಬಲಗಡೆಯಲ್ಲಿ" ಇರುವಾತನು ಎಂದು ಹೇಳಲಾಗುತ್ತಿತ್ತು. **(ಯೋಹಾನ 20:17, ಪ್ರಕಟಣೆ 3:12)**

ಇಂದು ನಾವು ಪರಲೋಕದ ತಂದೆಯನ್ನು ಕುರಿತು ಸತ್ಯವೇದವು ಏನು ಕಲಿಸುತ್ತದೆ ಎಂದು ಅಭ್ಯಾಸ ಮಾಡೋಣ.



**ಈಗ ನಾವು ಸ್ವತ: ನಮ್ಮ ಯಜಮಾನನು ನುಡಿದ ಮಾತುಗಳ ಮೂಲಕ ಆರಂಭಿಸೋಣ –**

**ಯೋಹಾನ 17:3**

**"…….ಒಬ್ಬನೇ ಸತ್ಯ ದೇವರಾಗಿರುವ ನಿನ್ನನ್ನೂ ತಿಳಿಯುವುದೇ ನಿತ್ಯಜೀವವು………"**

ಹೌದು ! ಯೇಸುವಿನ ಪ್ರಕಾರ ಪರಲೋಕದ ತಂದೆಯೇ… ಒಬ್ಬನೇ ಸತ್ಯ ದೇವರು !!

ಯೇಸುವಿನ ಈ ನುಡಿಗಳನ್ನು ದಯವಿಟ್ಟು ಗಮನಿಸಿರಿ! – ಇವುಗಳಿಗೆ ಆಳವಾದ ಅರ್ಥವಿದೆ!

**ಅತನು ಹೇಳಿದ್ದಕ್ಕೆ ಅರ್ಥ ಏನೆಂದರೆ –**

**"ನಿನ್ನನ್ನೂ"** – ಇದರ ಅರ್ಥವು ತಂದೆಯನ್ನು ಮಾತ್ರ ಎಂದು ಸೂಚಿಸುತ್ತದೆ !

"ಒಬ್ಬನೇ" – ಅಂದರೆ ತಂದೆ ಮಾತ್ರ ಒಬ್ಬನೇ ದೇವರು ಮತ್ತು ಅಲ್ಲಿ ತ್ರೈಯೇಕತ್ವದ ದೇವರುಗಳಿಲ್ಲ!


"ಸತ್ಯದೇವರು" – ಅಂದರೆ ಅನೇಕ ಸುಳ್ಳು ದೇವರುಗಳ ಮಧ್ಯೆ ಮತ್ತು ತಮ್ಮನ್ನು ದೇವರು ಎಂದು ಕರೆಯಿಸಿಕೊಳ್ಳುವವರ ಮಧ್ಯೆ, ತಂದೆ ಒಬ್ಬನೇ ಸತ್ಯ ದೇವರು.

**ಓಹ್ ! ಯೇಸುವಿನ ಸಾಕ್ಷಿಯು ಎಂತಹ ಅದ್ಭುತವಾಗಿದೆ.**

ಈಗ ನಾವು ಅಪೋಸ್ತಲನಾದ ಪೌಲನ ವಾಕ್ಯವನ್ನು ಓದೋಣ –

**1 ತಿಮೊಥೆಯನಿಗೆ 2:5**

**"ಏಕಂದರೆ ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು, ಮನುಷ್ಯನಾಗಿರುವ ಕ್ರಿಸ್ತ ಯೇಸುವೇ"**



ಇಲ್ಲಿ ಅಪೋಸ್ತಲನಾದ ಪೌಲನು ನಮಗೆ ಬೋಧಿಸುವುದು ಏನೆಂದರೆ ದೇವರು ಒಬ್ಬನೇ, ಮತ್ತು ಯೇಸು ಕ್ರಿಸ್ತನು ದೇವರಿಗೂ ಮನುಷ್ಯರಿಗೂ ಮಧ್ಯಸ್ತನಾಗಿದ್ದಾನೆ.

ಇನ್ನೂ ಅಪೋಸ್ತಲನಾದ ಪೌಲನು ನಮಗೆ ಬೋಧಿಸುವುದೇನೆಂದರೆ

**ಕೊಲೊಸ್ಸೆಯವರಿಗೆ 1:15**

**ಆತನು ಅದೃಶ್ಯನಾದ ದೇವರ ಪ್ರತಿರೂಪನೂ ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನ ಸ್ಥಾನಹೊಂದಿದವನೂ ಆಗಿದ್ದಾನೆ."**

ಹೌದು! ಪರಲೋಕದ ತಂದೆಯಾದ ದೇವರು ಅದೃಶ್ಯನಾದ ದೇವರಾಗಿದ್ದಾನೆ – ಆತ್ಮ ಸ್ವರೂಪನಾಗಿದ್ದಾನೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ಯೋಹಾನ 4:24 – "ದೇವರು ಆತ್ಮಸ್ವರೂಪನು"**

ನಂತರ ಅಪೋಸ್ತಲನಾದ ಪೌಲನು ದೇವರ ಬಗ್ಗೆ ನಮಗೆ ಹೇಳುವುದೇನೆಂದರೆ

**1 ಕೊರಿಂಥದವರಿಗೆ 8:5,6**

**"ಅನೇಕರನ್ನು ದೇವರುಗಳೆಂದೂ ಕರ್ತರೆಂದೂ ಪೂಜಿಸುವದುಂಟು ನಿಜವೇ; ಆಕಾಶದಲ್ಲಿಯಾಗಲಿ ಭೂವಿಯ ಮೇಲೆಯಾಗಲಿ ದೇವರುಗಳೆನಿಸಿಕೊಳ್ಳುವವರಿದ್ದಾರೆ, ನಮಗಾದರೋ ಒಬ್ಬನೆ ದೇವರಿದ್ದಾನೆ, ಆತನು ತಂದೆಯೆಂಬಾತನೇ......"**

ಹೌದು ! ಅಪೋಸ್ತಲನಾದ ಪೌಲನು ನಮಗೆ ಸ್ಪಷ್ಟವಾಗಿ ಹೇಳುವುದೇನೆಂದರೆ – ಜಗತ್ತಿನಲ್ಲೆಲ್ಲಾ **"ದೇವರುಗಳೆಂದೂ"** ಮತ್ತು **"ಕರ್ತರೆಂದೂ"** ಅನೇಕರಿದ್ದಾರೆ – **ಮನುಷ್ಯರಿಗೂ** ಮತ್ತು **ಆತ್ಮಕ್ಕೂ ನಿಜವಾಗಿಯೂ** **ಒಬ್ಬರೇ ದೇವರಿದ್ದಾನೆ,** ಆತನೇ......................**ಪರಲೋಕದ ತಂದೆ !**

**ಈ ಎಲ್ಲಾ ವಾಕ್ಯಗಳು ನಮಗೆ ಸ್ಪಷ್ಟವಾದ ಸಾಕ್ಷಿಯ ಮೂಲಕ ಸ್ಥಾಪಿಸುವುದೇನೆಂದರೆ ಒಬ್ಬನೇ ದೇವರಿದ್ದಾನೆ ಮತ್ತು ಆ ದೇವರು ತಂದೆಯಾಗಿದ್ದಾನೆ..... - ಪರಲೋಕದ ತಂದೆಯಾಗಿದ್ದಾನೆ !**

ಆದರೆ ಈ ಕೆಳಗಿನ ವಾಕ್ಯದಲ್ಲಿ ಅಪೋಸ್ತಲನಾದ ಪೌಲನು ಏನು ಹೇಳುತ್ತಾನೆಂದು ಗಮನಿಸಿರಿ –

**1 ಕೊರಿಂಥದವರಿಗೆ 8:7 – "ಆದರೆ ಈ ಜ್ಞಾನವು ಎಲ್ಲರಲ್ಲಿಯೂ ಇಲ್ಲ." (NIV)**

ಆಹಾ ! ಹೌದು ! ನಿಜವಾಗಿಯೂ ಕೆಲವರಿಗೆ ಮಾತ್ರ ಈ ಮಹಾ ಸತ್ಯ ಗೊತ್ತಿದೆ !!

**ಕ್ರೈಸ್ತರಲ್ಲಿ ಅನೇಕ ಜನರಿಗೆ ಈ ಮಹಾ ಸತ್ಯವು ಗೊತ್ತಿಲ್ಲ ! ಆದರೆ ಆತನ ಕೃಪೆಯಿಂದ ಈಗ ನಮಗೆ ಗೊತ್ತಿದೆ !!**

ಈಗ ನಾವು ಒಬ್ಬನೇ ಸತ್ಯ ದೇವರಾಗಿರುವ ಪರಲೋಕದ ತಂದೆಯನ್ನು ಕುರಿತು ಇನ್ನೂ ಹೆಚ್ಚಾಗಿ ತಿಳಿದುಕೊಳ್ಳೋಣ !

ಆತನು ಇಸ್ರಾಯೇಲ್ ದೇಶದ ದೇವರೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಅಪೋಸ್ತಲರ ಕೃತ್ಯಗಳು 3:13 – "ನಮ್ಮ ಪಿತೃಗಳಾದ ಅಬ್ರಹಾಮ ಇಸಾಕ ಯಾಕೋಬರ ದೇವರು ತನ್ನ ಸೇವಕನಾದ ಯೇಸುವನ್ನು ಮಹಿಮೆಪಡಿಸಿದ್ದಾನೆ......"**

ಹೌದು ! ಮೊದಲನೆಯದಾಗಿ ಆತನನ್ನು –

**"ಅಬ್ರಹಾಮ, ಇಸಾಕ, ಯಾಕೋಬರ ದೇವರೆಂದು"** ತಿಳಿಯಲಾಗುತ್ತಿತ್ತು.

ಆದರೆ ಅಬ್ರಹಾಮ, ಇಸಾಕ ಮತ್ತು ಯಕೋಬರಿಗೆ ತನ್ನನ್ನು ತಾನೇ ಪ್ರಕಟ ಪಡಿಸಿ –

# EL - SHADDAI

**"ಎಲ್ ಶಡ್ಡಾಯ್"** ಎಂದು ತಿಳಿಯಪಡಿಸಿದನು.

ಇಬ್ರಿಯ ಭಾಷೆಯಲ್ಲಿ ಇದಕ್ಕೆ "ಸರ್ವಶಕ್ತನಾದ ದೇವರು" ಎಂದರ್ಥ **(ವಿಮೋಚನಕಾಂಡ 6:3)** ಮೋಶೆಯು ಮುಳ್ಳಿನ ಪೊದೆಯಲ್ಲಿ ದೇವರನ್ನು ಭೇಟಿಯಾದಾಗ ಮೋಶೆಯು ದೇವರನ್ನು ನಿನ್ನ ಹೆಸರೇನು ಎಂದು ಕೇಳಿದನು ಮತ್ತು ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ವಿಮೋಚನಕಾಂಡ 3:13**

**"ಮೋಶೆ ದೇವರಿಗೆ – ನಾನು ಇಸ್ರಾಯೇಲ್ಯರ ಬಳಿಗೆ ಬಂದು ನಿಮ್ಮ ಪಿತೃಗಳ ದೇವರು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ದಾನೆಂದು ಹೇಳಿದಾಗ ಒಂದು ವೇಳೆ ಅವರು – ಆತನ ಹೆಸರೇನೆಂದು ನನ್ನನ್ನು ಕೇಳಿದರೆ ನಾನೇನು ಉತ್ತರ ಕೊಡಬೇಕು ಎನ್ನಲು......"**



ಹೌದು ! ಮೋಶೆಯು ಸಹ ಆತನನ್ನು ಏನೆಂದು ತಿಳಿದಿದ್ದನೆಂದರೆ –

**"ಅಬ್ರಹಾಮನ ದೇವರು, ಇಸಾಕನ ದೇವರು ಮತ್ತು ಯಾಕೋಬನ ದೇವರು"**

ಆದ್ದರಿಂದ ಸರ್ವಶಕ್ತನು ಮೋಶೆಗೆ ಹೇಳಿದ್ದೇನೆಂದರೆ ನಾನು **''ನಿಮ್ಮ ಪಿತೃಗಳ ದೇವರು''**

ನಂತರ ದೇವರು ಮೋಶೆಗೆ ಉತ್ತರ ನೀಡಿದನು ಮತ್ತು ಇದನ್ನು ಕುರಿತು ನಾವು ಹೀಗೆ ಓದುತ್ತೇವೆ –

**ವಿಮೋಚನಕಾಂಡ 3:14**

**"ದೇವರು ಅವನಿಗೆ – ಇರುವಾತನೇ ಆಗಿದ್ದೇನೆ....."**

ಹೌದು! ಈ ಹೆಸರಿನ ಮೂಲಕವೇ ದೇವರು ತನ್ನನ್ನು ತಾನೇ ಪ್ರಕಟ ಪಡಿಸಿದನು! ಈ ಹೆಸರನ್ನು ದೇವರು ಇಬ್ರಿಯ ಭಾಷೆಯಲ್ಲಿ ಪ್ರಕಟ ಪಡಿಸುವುದನ್ನು ಹೀಗೆ ಬರೆಯಲಾಗುವುದು –

**"ವೈ ಎಚ್ ಡಬ್ಲ್ಯು ಎಚ್"**

**Y H W H**

ಇದನ್ನು ಉಚ್ಚರಿಸಲು ಸಾಧ್ಯವಿಲ್ಲ !!

ಆದ್ದರಿಂದ, ಈ ಅಕ್ಷರಗಳ ಮಧ್ಯೆ ಸ್ವರವನ್ನು **(vowels)** ಸೇರಿಸಲಾಗುತ್ತದೆ ಮತ್ತು ಇಬ್ರಿಯ ಭಾಷೆಯಲ್ಲಿ ದೇವರ ಹೆಸರನ್ನು ಹೀಗೆ ಕರೆಯಲಾಗುತ್ತದೆ

**YaH WeH** **"ಯಾಹ್‌ವೇಹ್"**

**ಅಥವಾ**

**YaH WaH** **"ಯಾಹ್‌ವಾಹ್"**

ನಂತರ ಹೊಸ ಒಡಂಬಡಿಕೆಯಲ್ಲಿ ದೇವರು ತನ್ನ ವಾಕ್ಯಗಳನ್ನು ಗ್ರೀಕ್ ಭಾಷೆಯ ಮೂಲಕ ತನ್ನನ್ನು ಪ್ರಕಟ ಪಡಿಸಿದಾಗ ಗ್ರೀಕ್ ಭಾಷೆಯಲ್ಲಿ ದೇವರ ಹೆಸರು ಹೀಗಾಯಿತು

**J H V H** **ಜೆ ಎಚ್ ವಿ ಎಚ್**

ಇದರಂತೆಯೇ, ಗ್ರೀಕ್ ಭಾಷೆಯಲ್ಲಿ ಯೇಸುವಿನ ಹೆಸರು, ಇಬ್ರಿಯ ಭಾಷೆಯಲ್ಲಿ "ಯೇಶುವಾ" (YESHUA) !!

ಹಾಗೆಯೇ ಗ್ರೀಕ್ ಭಾಷೆಯಲ್ಲಿ ದೇವರ ಹೆಸರು ಸ್ವರವನ್ನು (vowels) ಸೇರಿಸಿದಾಗ ಇದರ ಉಚ್ಚಾರಣೆಯು–

**"ಜೆಹೋವಾ"** ಅಥವಾ **JeHoVaH**

**ಎಂದಾಗುತ್ತದೆ.**

ಹೌದು ! ಈ ಹೆಸರಿನ ಮೂಲಕವೇ ದೇವರು ಮೋಶೆಗೆ ತನ್ನನ್ನು ಪ್ರಕಟ ಪಡಿಸಿದನು ಮತ್ತು ಈ ಹೆಸರು ಸದಾಕಾಲಕ್ಕೂ ಆತನ ಹೆಸರಾಗಿರುವದು ಎಂದು ಹೇಳುವುದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ವಿಮೋಚನಕಾಂಡ 3:15 – ".....ಇದು ಸದಾಕಾಲಕ್ಕೂ ನನ್ನ ಹೆಸರು; ಇದು ತಲತಲಾಂತರಕ್ಕೂ ನನ್ನನ್ನು ಸ್ಮರಿಸಬೇಕಾದ ನಾಮ."**

ಆಂಗ್ಲ ಕೆ.ಜೆ.ವಿ. ಸತ್ಯವೇದದಲ್ಲಿ ದೇವರ ಹೆಸರನ್ನು ಕೇವಲ ನಾಲ್ಕು ಸ್ಥಳಗಳಲ್ಲಿ ಇರುವುದನ್ನು ನಾವು ನೋಡುತ್ತೇವೆ –

**ಕೀರ್ತನೆ 83:18 / ವಿಮೋಚನಕಾಂಡ 6:3 / ಯೆಶಾಯ 12:2 / ಯೆಶಾಯ 26:4**

**"ಆಗ ಯೆಹೋವನಾಮದಿಂದ ಪ್ರಸಿದ್ಧನಾದ ನೀನೊಬ್ಬನೇ ಭೂಲೋಕದಲ್ಲೆಲ್ಲಾ ಸರ್ವೋನ್ನತನೆಂದು ಗ್ರಹಿಸುವರು."**

**"ಅಬ್ರಹಾಮ ಇಸಾಕ ಯಾಕೋಬರಿಗೆ ನಾನು ಸರ್ವಶಕ್ತನಾದ ದೇವರೆಂಬ ಹೆಸರುಳ್ಳವನಾಗಿ ಕಾಣಿಸಿಕೊಂಡೆನೇ ಹೊರತು ಯೆಹೋವನು ಎಂಬ ನನ್ನ ಹೆಸರಿನಿಂದ ಅವರಿಗೆ ಗೋಚರವಾಗಲಿಲ್ಲ."**

**"ಇಗೋ ದೇವರೇ ನನಗೆ ರಕ್ಷಣೆ, ನಾನು ಹೆದರದೆ ಭರವಸಪಡುವೆನು; ನನ್ನ ಬಲವೂ ಕೀರ್ತನೆಯೂ ಯಾಹುಯೆಹೋವನಷ್ಟೆ, ಆತನೇ ನನಗೆ ರಕ್ಷಕನಾದನು ಎಂಬದೇ."**

**"ಯೆಹೋವನಲ್ಲಿ ಸದಾ ಭರವಸವಿಡಿರಿ; ಯಾಹುಯೆಹೋವನು ಶಾಶ್ವತವಾಗಿ ಆಶ್ರಯಗಿರಿಯಾಗಿದ್ದಾನೆ."**

.....ಮತ್ತು ಐದನೆಯ ಸಲ ಆತನನ್ನು "ಯಾಹು" ಎಂದು ಸೂಚಿಸುವುದನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

## ಕೀರ್ತನೆ 68:4

"ದೇವರಿಗೆ ಗಾಯನಮಾಡಿರಿ; ಆತನ ನಾಮವನ್ನು ಭಜಿಸಿರಿ; ಅರಣ್ಯದಲ್ಲಿ ಸವಾರಿಮಾಡುತ್ತಾ ಬರುವಾತನಿಗೆ ರಾಜಮಾರ್ಗವನ್ನು ಸಿದ್ಧಮಾಡಿರಿ. ಆತನ ನಾಮಧೇಯ ಯಾಹು; ಆತನ ಸನ್ನಿಧಿಯಲ್ಲಿ ಉಲ್ಲಾಸಿಸಿರಿ."

**ಆಂಗ್ಲ ಕೆ.ಜೆ.ವಿ. ಸತ್ಯವೇದದಲ್ಲಿ ಕೇವಲ ಐದು ಸಲ ಮಾತ್ರ ದೇವರ ಹೆಸರು ಇರುವುದನ್ನು ನೋಡಿ ನಿಮಗೆ ಆಶ್ಚರ್ಯವಾಗುತ್ತಿದೆಯೆ ?**

ನಿಜವಾಗಿಯೂ, ಹಳೆಯ ಒಡಂಬಡಿಕೆಯಲ್ಲಿ ದೇವರ ಹೆಸರು 7000 ಕ್ಕಿಂತಲು ಹೆಚ್ಚು ಸಲ ಬರುವುದನ್ನು ನೋಡುತ್ತೇವೆ. !

ಕೆ. ಜೆ. ವಿ ಸತ್ಯವೇದದಲ್ಲಿ ಆ ಹೆಸರನ್ನು ಈಗ


➡ "**ಕರ್ತನು**" **(LORD)** ಎಂದು ಬದಲಾಗಿಸಿದೆ

(ದಪ್ಪಕ್ಷರಗಳಲ್ಲಿ)

ಆದರೆ ಕನ್ನಡ, ಹಿಂದಿ ಮರಾಠಿ, ಮತ್ತು ಬೇರೆ ಭಾಷೆಯ ಸತ್ಯವೇಧಗಳಲ್ಲಿ ದೇವರ ಹೆಸರು ಎಲ್ಲಾ ಸ್ಥಳಗಳಲ್ಲಿ ಹೇಗಿದೆಯೋ ಹಾಗೆಯೇ ಕೊಡಲಾಗಿದೆ. !

**(ದಯವಿಟ್ಟು ಬೇರೆ ಭಾಷೆಗಳ ಸತ್ಯವೇದಗಳನ್ನು ಓದಿ ಈ ವಿಷಯವನ್ನು ಪರೀಕ್ಷಿಸಿರಿ)**

ಆದರೆ, ದೇವರ ಹೆಸರನ್ನು ತಿಳಿಯುವ ಈ ಮಹಾ ಸತ್ಯವನ್ನು ಹೊಂದಲು ಆಶೀರ್ವದಿಸಲ್ಪಟ್ಟ ನಾವು ಒಂದು ಅತಿ ಮುಖ್ಯವಾದ ವಿಷಯವನ್ನು ನೆನಪಿನಲ್ಲಿಡಬೇಕು –




## ವಿಮೋಚನಕಾಂಡ 20:7

"ನಿನ್ನ ದೇವರಾದ ಯೆಹೋವನ ಹೆಸರನ್ನು ಅಯೋಗ್ಯಕಾರ್ಯಕ್ಕಾಗಿ ಎತ್ತಬಾರದು ಯೆಹೋವನು ತನ್ನ ಹೆಸರನ್ನು ಅಯೋಗ್ಯ ಕಾರ್ಯಕ್ಕಾಗಿ ಎತ್ತುವವನನ್ನು ಶಿಕ್ಷಿಸದೆ ಬಿಡುವದಿಲ್ಲ."

**ಹೌದು ! ಮೂರನೇ ಆಜ್ಞೆಯು ದೇವರ ಹೆಸರನ್ನು**

ಅಯೋಗ್ಯ ಕಾರ್ಯಕ್ಕಾಗಿ ಎತ್ತಬಾರದೆಂದು ಎಚ್ಚರಿಸುತ್ತದೆ!

**ಆ ಹೆಸರು ಎಷ್ಟು ಆಶೀರ್ವದಿಸಲ್ಪಟ್ಟ ಮತ್ತು ಪರಿಶುದ್ಧವಾದ ಮತ್ತು ಗೌರವ ಇರುವ ನಾಮವಾಗಿದೆ !!**

ಕೆಲವು ಕ್ರೈಸ್ತ ಪಂಗಡದವರು ತಂದೆಯ ಹೆಸರನ್ನು ರೂಢಿಯಾಗಿ ಮತ್ತು ಸಾಮಾನ್ಯವಾಗಿ ಎತ್ತುತ್ತಾರೆ. ಆ ಪಂಗಡದವರ ಹೆಸರು –

"ಯೆಹೋವನ ಸಾಕ್ಷಿಗಳು" (Jehovah's Witnesses) ಕಿರಿದಾಗಿ 'J W '

ಇವರ ಉದಾಹರಣೆಯಂತೆ ನಾವು ಹಿಂಬಾಲಿಸದೆ ಎಚ್ಚರಿಕೆಯಾಗಿರಬೇಕು.

ಸ್ವಲ್ಪ ಇದರ ಬಗ್ಗೆ ಯೋಚಿಸಿ ನೋಡಿ !

**ನಮ್ಮ ಲೌಕಿಕ ತಂದೆಯನ್ನು ಏಕೆ ಹೆಸರು ಹಿಡಿದು ನಾವು ಕರೆಯುವುದಿಲ್ಲ ?**

**ಹೌದು ! ಏಕೆಂದರೆ ನಾವು ಮರ್ಯಾದೆ ಮತ್ತು ಗೌರವ ಕೊಡುತ್ತೇವೆ ಅಲ್ಲವೆ ??!**

**ಹಾಗಾದರೆ ಎಷ್ಟು ಅಧಿಕವಾಗಿ ನಮ್ಮ ಪರಲೋಕದ ತಂದೆಗೆ ಗೌರವ ಕೊಡಬೇಕಲ್ಲವೆ ??!**

**ಮತ್ತು ಹೊಸ ಒಡಂಬಡಿಕೆಯಲ್ಲಿ ಯೇಸು ಎಂದಾದರು ದೇವರ ಹೆಸರನ್ನು ಹಿಡಿದು ಕರೆದದ್ದನ್ನು ಓದಿದ್ದೇವೆಯೇ ?**

ಇದಕ್ಕೆ ಉತ್ತರ.... ಇಲ್ಲ !

## ಯೇಸುವಿಗೆ ದೇವರ ಹೆಸರು ಗೊತ್ತಿರಲಿಲ್ಲವೇ?

**ಮತ್ತು ಅಪೋಸ್ತಲರು ಮತ್ತು ಅವರ ಪತ್ರಿಕೆಗಳಲ್ಲಿ ಎಷ್ಟು ಸಲ ದೇವರ ಹೆಸರನ್ನು ಹಿಡಿದು ಕರೆಯುವುದನ್ನು ನಾವು ನೋಡುತ್ತೇವೆ?**

**ಹೌದು !.... ಒಂದು ಸಲವೂ ಇಲ್ಲ!**

## ಅಪೋಸ್ತಲರಿಗೆ ದೇವರ ಹೆಸರು ಗೊತ್ತಿರಲಿಲ್ಲವೇ?

ನಿಜವಾಗಿಯೂ ಅವರಿಗೆ ಗೊತ್ತಿತ್ತು!

ನೆನಪಿಡಿರಿ, ಅವರು ಕ್ರೈಸ್ತರಾಗುವುದಕ್ಕೆ ಮುಂಚೆ ಯೆಹೂದ್ಯರಾಗಿದ್ದರು!

ಯಜಮಾನನಾದ ಯೇಸು ಅವರಿಗೆ ಕಲಿಸಿ ಕೊಟ್ಟಂತೆಯೇ ಅವರು ದೇವರಿಗೆ ಸಂಬೋಧನೆ ಮಾಡುತ್ತಿದ್ದರು ಎಂದು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಮತ್ತಾಯ 6:9**

**"ಆದದರಿಂದ ನೀವು ಹೀಗೆ ಪ್ರಾರ್ಥನೆಮಾಡತಕ್ಕದ್ದು – ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ."**

ಹೌದು! ಆದ್ದರಿಂದ ಅಪ್ರೋಸ್ತಲರು ತಮ್ಮ ಪತ್ರಿಕೆಗಳಲ್ಲಿ ದೇವರನ್ನು ಕುರಿತು ಹೀಗೆ ಸಂಬೋಧಿಸುವುದನ್ನು ನೋಡುತ್ತೇವೆ –

**ಅಪ್ರೋಸ್ತಲನಾದ ಪೇತ್ರನು**

**1 ಪೇತ್ರ 1:3 - "ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯೂ ದೇವರೂ ಆಗಿರುವಾತನಿಗೆ ಸ್ತೋತ್ರವಾಗಲಿ......"**

**ಅಪ್ರೋಸ್ತಲನಾದ ಯಾಕೋಬನು**

**ಯಾಕೋಬನು 1:17 – ".....ಮೇಲಣಿಂದ ಸಕಲವಿಧವಾದ ಬೆಳಕಿಗೂ ಮೂಲಕಾರಣನಾದವನಿಂದ ಆಗಿರುವಾತನು....."**

**ಅಪ್ರೋಸ್ತಲನಾದ ಪೌಲನು**

**ಎಫೆಸದವರಿಗೆ 1:17 – "ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ಪ್ರಭಾವಸ್ವರೂಪನಾದ ತಂದೆಯೂ ಆಗಿರುವಾತನು......"**

**ಅಪ್ರೋಸ್ತಲನಾದ ಯೂದನು**

**ಯೂದ:25 – ".....ಶಕ್ತನಾಗಿರುವ ನಮ್ಮ ರಕ್ಷಕನಾದ ಒಬ್ಬನೇ ದೇವರಿಗೆ....."**

**ಹೌದು! ನಾವೂ ಸಹ ಅವರಿಂದ ಕಲಿತು ಅವರ ಉದಾಹರಣೆಯ ಮೂಲಕ ನಮ್ಮ ಪರಲೋಕ ತಂದೆಯನ್ನು ಗೌರವಿಸಬೇಕು ಮತ್ತು ಭಯಭಕ್ತಿಯಿಂದ ಕಾಣಬೇಕು.**

ಈಗ ಅನೇಕ ಕ್ರೈಸ್ತರ ಅನಿಸಿಕೆ ಏನೆಂದರೆ ಸ್ವತಃ ಯೇಸುವೇ ಸರ್ವಶಕ್ತನಾದ ಪರಲೋಕ ತಂದೆ ಎಂದು ಏಕೆಂದರೆ ಯೇಸು

ಈ ಮುಂದಿನ ವಾಕ್ಯದಲ್ಲಿ ಹೇಳಿರುವುದೇ ಕಾರಣ –

**ಯೋಹಾನ 8:58**

**"ಅಂದಾಗ ಯೇಸು –ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಅಬ್ರಹಾಮನು ಹುಟ್ಟುವದಕ್ಕಿಂತ ಮುಂಚಿನಿಂದಲೂ ನಾನು ಇದ್ದೇನೆ ಅಂದನು."**

ಹೌದು! ಯೇಸು "ನಾನು ಇದ್ದೇನೆ" ಎಂಬ ಮಾತು ಉಪಯೋಗಿಸಿದ್ದರಿಂದ ಅನೇಕರು ಯೇಸುವೇ ಸರ್ವಶಕ್ತನಾದ ಪರಲೋಕದ ತಂದೆ
ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಏಕೆಂದರೆ ಆತನು ಮೋಶೆಗೆ ಉರಿಯುವ ಮುಳ್ಳಿನ ಪೊದೆಯೊಳಗಿಂದ ಆತನು ತನ್ನ ಹೆಸರು –

**"ಇರುವಾತನೇ ಆಗಿದ್ದೇನೆ"**

ಆದರೆ ಜಾಗರೂಕತೆಯಿಂದ ಅಭ್ಯಾಸ ಮಾಡಿದ ನಂತರ ಏನು ತಿಳಿಯುತ್ತದೆ ಎಂದರೆ ಇದು ಹಾಗಲ್ಲ ಮತ್ತು ಯೇಸು ಹೇಳಿದ್ದಕ್ಕೆ ಅದು ಅರ್ಥವಲ್ಲ.

ಏಕೆಂದರೆ ಪರಲೋಕದ ತಂದೆಯ ಬಗ್ಗೆ ಹೀಗೆ ಬರೆದಿದೆ

**1 ತಿಮೊಥೆಯನಿಗೆ 6:16**

**"ತಾನೊಬ್ಬನೇ ಅಮರತ್ವವುಳ್ಳವನೂ ಅಗಮ್ಯವಾದ ಬೆಳಕಿನಲ್ಲಿ ವಾಸಮಾಡುವವನೂ ಆಗಿದ್ದಾನೆ; ಮನುಷ್ಯರಲ್ಲಿ ಯಾರೂ ಆತನನ್ನು ಕಾಣಲಿಲ್ಲ, ಯಾರೂ ಕಾಣಲಾರರು; ಆತನಿಗೆ ಮಾನವೂ ನಿತ್ಯಾಧಿಪತ್ಯವೂ ಇರಲಿ. ಆಮೆನ್."**

ಹೌದು! ಪರಲೋಕದ ತಂದೆಯನ್ನು ಯಾರೂ ಕಾಣಲಿಲ್ಲ ಹಾಗೂ ಯಾರೂ ಕಾಣಲಾರರು!

ಸ್ವತಃ ಯೇಸು ಈ ಸತ್ಯಾಂಶವನ್ನು ಕೆಳಗಿನ ವಾಕ್ಯದಲ್ಲಿ ಹೇಳಿದ್ದಾನೆ –

**ಯೋಹಾನ 5:37 – "ಇದಲ್ಲದೆ ನನ್ನನ್ನು ಕಳುಹಿಸಿಕೊಟ್ಟ ತಂದೆಯು ನನ್ನ ವಿಷಯವಾಗಿ ಸಾಕ್ಷಿಹೇಳಿದ್ದಾನೆ ನೀವು ಎಂದಾದರೂ ಆತನ ಧ್ವನಿಯನ್ನು ಕೇಳಿದ್ದೂ ಇಲ್ಲ, ಆತನ ರೂಪವನ್ನು ನೋಡಿದ್ದೂ ಇಲ್ಲ...."**

**ಆದ್ದರಿಂದ ನಾವು ತಿಳಿದು ಕೊಂಡದ್ದೇನೆಂದರೆ ಯೇಸು ಪರಲೋಕದ ತಂದೆ ಅಲ್ಲ ಮತ್ತುಪರಲೋಕದ ತಂದೆಯಾಗಿರಲು ಸಾಧ್ಯವಿಲ್ಲ !**

ಇದು ಮುಂದಿನ ವಾಕ್ಯಗಳಲ್ಲಿ ಇನ್ನೂ ನಿಶ್ಚಯವಾಗುತ್ತದೆ –

**ಯೋಹಾನ 1:18; ಕೊಲೊಸ್ಸೆಯವರಿಗೆ 1:15**

**"ದೇವರನ್ನು ಯಾರೂ ಎಂದೂ ಕಂಡಿಲ್ಲ; ಯಾವನು ಏಕಪುತ್ರನೂ ಸ್ವತಃ ದೇವರೂ ಆಗಿದ್ದು ತಂದೆಯ ಎದೆಯಲ್ಲಿದ್ದಾನೋ ಆತನೇ ತಿಳಿಯಪಡಿಸಿದನು."**

**"ಆತನು ಅದೃಶ್ಯನಾದ ದೇವರ ಪ್ರತಿರೂಪನೂ ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನ ಸ್ಥಾನಹೊಂದಿದವನೂ ಆಗಿದ್ದಾನೆ."**

ಹೌದು ಪರಲೋಕದ ತಂದೆಯನ್ನು ಯಾರೂ ಕಾಣದ "ಅದೃಷ್ಯನಾದ ದೇವರು" ಆದರೆ ಯೇಸುವನ್ನು ಕುರಿತು ಹೀಗೆ ಓದುತ್ತೇವೆ–

**1 ಯೋಹಾನ 1:1**

**"ನಾವು ನಿಮಗೆ ಪ್ರಸಿದ್ಧಿಪಡಿಸುವ ಜೀವವಾಕ್ಯವು ಆದಿಯಿಂದ ಇದ್ದದ್ದು. ನಾವು ಅದನ್ನು ಕಿವಿಯಾರೆ ಕೇಳಿ ಕಣ್ಣಾರೆ ಕಂಡು ಮನಸ್ಸಿಟ್ಟು ನೋಡಿ ಕೈಯಿಂದ ಮುಟ್ಟಿದ್ದೇವೆ."**

ಹೌದು! ಈ ವಿಷಯವು ಬಹಳ ಬಹಳ ಸ್ವಷ್ಟವಾಗಿದೆ !

ಈಗ ನಾವು ಕೆಳಗಿನ ವಾಕ್ಯವನ್ನು ಓದುವುದರ ಮೂಲಕ ಮಹಿಮೆಯುಳ್ಳ ಪರಲೋಕದ ತಂದೆಯನ್ನು ಕುರಿತು ಅಭ್ಯಾಸ ಮಾಡೋಣ.... –

**ಕೀರ್ತನೆ 90:2**

**"ಬೆಟ್ಟಗಳು ಉಂಟಾಗುವದಕ್ಕಿಂತ, ಭೂಮಿಯೂ ಅದರ ದೇಶಗಳೂ ನಿರ್ಮಾಣವಾಗುವದಕ್ಕಿಂತ ಮುಂಚಿನಿಂದ ಯುಗಯುಗಾಂತರಗಳಲ್ಲಿಯೂ ನೀನೇ ದೇವರು."**

**ಯೋಹಾನ 5:26**

**"ತಂದೆಯು ತಾನು ಹೇಗೆ ಸ್ವತಃ ಜೀವವುಳ್ಳವನಾಗಿದ್ದಾನೋ ಹಾಗೆಯೇ ಮಗನೂ ಸ್ವತಃ ಜೀವವುಳ್ಳವನಾಗಿರುವಂತೆ ಮಾಡಿದನು."**

ಹೌದು! ಅಮರತ್ವ ಸ್ವಭಾವವುಳ್ಳ ದೇವರಿಗೆ ಒಂದುಗೂಡಿಸುವಂತಹ ಯೋಚನೆ ಏನೆಂದರೆ,

......ಯೆಹೋವ ದೇವರಿಗೆ ಆರಂಭವೇ ಇಲ್ಲ !

ಇಂತಹ ದಿಗಿಲುಗೊಳ್ಳುವಂತಹ ಯೋಚನೆಯು ನಮ್ಮ ಮಿತಿಯುಳ್ಳ ಬುದ್ದಿಗೆ ಇರುವುದಿಲ್ಲ ಅಥವಾ ಅರ್ಥವಾಗುವುದಿಲ್ಲ. !

**ನಮ್ಮ ಸುತ್ತಲೂ ಇರುವ ಜೀವವುಳ್ಳ ಮತ್ತು ಜೀವವಿಲ್ಲದ ಎಲ್ಲಕ್ಕೂ ಒಂದು ಆರಂಭವಿದೆ.**

ಸತ್ಯವೇದದಲ್ಲಿ ನಾವು ಅನೇಕ ಆರಂಭವನ್ನು ಕುರಿತು ಓದುತ್ತೇವೆ–

**ಯೋಹಾನ 8:44**

“ಅವನು ಆದಿಯಿಂದಲೂ ಕೊಲೆಗಾರನಾಗಿದ್ದು
ಸತ್ಯದಲ್ಲಿ ನಿಲ್ಲಲಿಲ್ಲ”



ಮನುಷ್ಯ ಜಾತಿಯ ಸೃಷ್ಟಿಯು ಇಲ್ಲಿಂದಲೇ ಆರಂಭವಾಯಿತು !

**ಯೋಹಾನ 1:1**

“ಆದಿಯಲ್ಲಿ ವಾಕ್ಯವಿತ್ತು..."

ಇದು ದೇವರು ತನ್ನ ಒಬ್ಬನೇ ಮಗನಾದ – ಯೇಸುವನ್ನು ಸೃಷ್ಟಿಸಿದ ಆರಂಭವಾಗಿದೆ !



## ಆದಿಕಾಂಡ 1:1

**"ಆದಿಯಲ್ಲಿ ದೇವರು ಆಕಾಶವನ್ನು ಭೂಮಿಯನ್ನು ಉಂಟು ಮಾಡಿದನು"**

**ಇದು ದೇವರ ಸೃಷ್ಟಿ ಕಾರ್ಯಗಳಲ್ಲಿನ ಆರಂಭವಾಗಿತ್ತು !**



**ಆದರೆ ದೇವರನ್ನು ಕುರಿತು ನಾವು ಓದುವುದೇನೆಂದರೆ ಆತನಿಗೆ ಆರಂಭವೇ ಇಲ್ಲ ! ಆತನು ಎಂದಿಗೂ.... ಎಂದಿಗೂ.... ಎಂದಿಗೂ ಇರುವನು !**

ಆದ್ದರಿಂದಲೇ ದೇವರು ತನ್ನನ್ನು ಕುರಿತು ಹೀಗನ್ನುತ್ತಾನೆ –

**"ಇರುವಾತನೇ ಆಗಿದ್ದೇನೆ"** (ನಿತ್ಯನಾದವನು – **ಫ್ರೆಂಚ್ ಸತ್ಯವೇದದಲ್ಲಿ "ಲೆಸ್ ಎಟರ್‌ನಲ್"**) ಈಗ ನಾವು ಭಯಂಕರನಾದ ನಮ್ಮ ಪರಲೋಕದ ದೇವರನ್ನು ಕುರಿತು ಇನ್ನೂ ಹೆಚ್ಚಾಗಿ ಅಭ್ಯಾಸ ಮಡೋಣ –

## ಯೆರೆಮಿಯ 32:27

**"ಇಗೋ, ನಾನು ಯೆಹೋವನು, ನರಪ್ರಾಣಿಗೆಲ್ಲಾ ದೇವರು; ನನಗೆ ಅಸಾಧ್ಯವಾದದ್ದುಂಟೋ?"**

## ಯೆಶಾಯ 45:12

**"ಭೂಲೋಕವನ್ನುಂಟುಮಾಡಿ ಅದರಲ್ಲಿನ ಮನುಷ್ಯರನ್ನು ಸೃಷ್ಟಿಸಿದವನು ನಾನೇ. ನನ್ನ ಕೈಗಳೇ ಆಕಾಶಮಂಡಲವನ್ನು ಹರಡಿದವು; ನಕ್ಷತ್ರಸೈನ್ಯಕ್ಕೆ ಅಪ್ಪಣೆಕೊಟ್ಟವನೂ ನಾನೇ."**



## ಯೋಬನು 12:10

**"ಪ್ರತಿಪ್ರಾಣಿಯ ಪ್ರಾಣವೂ ಸಮಸ್ತಮನುಷ್ಯರ ಆತ್ಮಗಳೂ ಆತನ ಕೈಯಲ್ಲಿರುವವು."**

ಹೌದು ! ಪರಲೋಕದ ತಂದೆ ಯೆಹೋವನು,

➡ **ಎಲ್ಲಾ ನರ ಪ್ರಾಣಿಗಳ ಮಹಾ ಸೃಷ್ಟಿ ಕರ್ತನು.**

➡ .....ಮತ್ತು ಎಲ್ಲಾ ಮನುಷ್ಯ ಜಾತಿಗೆ ಮತ್ತು ಶರೀರಭಾವದವರಿಗೆ ಜೀವ ನೀಡುವವನು.

ಮತ್ತು ಇನ್ನೊಂದು ಆಸಕ್ತಿಯುಳ್ಳ ವಿಷಯವನ್ನು ಈಗ ನಾವು ಓದೋಣ–

## ಯೆಶಾಯ 44:6-8; 43:10,11

**"ಇಸ್ರಾಯೇಲ್ಯರ ಅರಸನು ವಿಮೋಚಕನು ಆಗಿರುವ ಸೇನಾಧೀಶ್ವರನಾದ ಯೆಹೋವನು ಹೀಗೆನ್ನುತ್ತಾನೆ – ನಾನೇ ಆದಿ, ಅಂತ್ಯವೂ ನಾನೇ; ನಾನು ಹೊರತು ಯಾವ ದೇವರೂ ಇಲ್ಲ ನಾನು ಪುರಾತನದವರನ್ನು ಸೃಷ್ಟಿಸಿದಂದಿನಿಂದ ನನ್ನ ಹಾಗೆ ಯಾರು ಪ್ರಕಟಿಸಿಕೊಂಡಿದ್ದಾರೆ? ಅಂಥವರಿದ್ದರೆ ನನ್ನೆದುರಿಗೆ ಹೇಳಿ ಸ್ಥಾಪಿಸಲಿ; ಇಲ್ಲವೆ**

**ಮುಂದಿನವುಗಳನ್ನು ಈಗ ತಿಳಿಸಲಿ, ಭವಿಷ್ಯತ್ತುಗಳನ್ನು ಹೇಳಲಿ. ಹೆದರ ಬೇಡಿರಿ, ಅಂಜದಿರಿ! ನಾನು ಪೂರ್ವದಿಂದಲೂ ನಿಮಗೆಹೇಳಿ ಪ್ರಕಟಿಸಿಕೊಂಡೆನಷ್ಟೆ. ನೀವೇ ನನ್ನ ಸಾಕ್ಷಿಗಳು. ನಾನಲ್ಲದೆ ಇನ್ನೊಬ್ಬ ದೇವರಿದ್ದಾನೋ? ಇನ್ನು ಯಾವ ಶರಣನೂ ಇಲ್ಲ, ಯಾರೂ ನನಗೆ ಗೊತ್ತಿಲ್ಲ."**

**"ಯೆಹೋವನ ಮಾತೇನಂದರೆ – ನೀವು ನನ್ನ ಸಾಕ್ಷಿ, ನಾನು ಆರಿಸಿಕೊಂಡಿರುವ ಸೇವಕನು; ನೀವು ನನ್ನನ್ನು ತಿಳಿದು ನಂಬಿ ನನ್ನನ್ನೇ ಪರಮಾತ್ಮನು ಎಂದು ಗ್ರಹಿಸುವ ಹಾಗೆ [ಇದನ್ನು ನಡಿಸಿದೆನು]; ನನಗಿಂತ ಮುಂಚೆ ಯಾವ ದೇವರೂ ಇರಲಿಲ್ಲ, ನನ್ನ ಅನಂತರದಲ್ಲಿಯೂ ಇರುವದಿಲ್ಲ. ನಾನೇ, ನಾನೇ ಯೆಹೋವನು; ನಾನು ಹೊರತುಯಾವ ರಕ್ಷಕನೂ ಇಲ್ಲ."**

ಈ ಎರಡು ವಾಕ್ಯಗಳಲ್ಲಿ ಪರಲೋಕದ ತಂದೆಯಾದ ಯೆಹೋವನು ತನ್ನ ಬಗ್ಗೆ ತಾನೇ ಹೀಗೆ ಹೇಳುವುದನ್ನು ನೋಡುತ್ತೇವೆ...

ಹೌದು! ಯೆಹೊವ ದೇವರು ಹೇಳುವುದೇನೆಂದರೆ ಆತನೇ

**....ಇಸ್ರಾಯೇಲ್ಯರ ವಿಮೋಚಕನು ಮತ್ತು ಆತನೊಬ್ಬನೇ ದೇವರು**

**....."ಮೊದಲ (ದೇವರು) ಮತ್ತು ಕೊನೆಯ (ದೇವರು)"**

**...."ರಕ್ಷಕನು" ಮತ್ತು ಕರ್ತನಾದ ಯೆಹೋವ ಬಿಟ್ಟರೆ ಬೇರೆ ದೇವರು ಇರಲು ಸಾಧ್ಯವಿಲ್ಲ!**

**ಈ ಎಲ್ಲಾ ವಾಕ್ಯಗಳು ನಮಗೆ ಪರಿಚಯವಿದ್ದಂತೆ ತೋರುತ್ತಿದೆಯೆ?**

ಹೌದು! ಈ ಎಲ್ಲಾ ವಿಧವಾದ ಹೆಸರುಗಳು ಹೊಸ ಒಡಂಬಡಿಕೆಯಲ್ಲಿ ಯೇಸುವನ್ನು ಕುರಿತು ವರ್ಣಿಸಲು ಉಪಯೋಗಿಸಲಪಟ್ಟಿರುವ ಪದಗಳು.

ಪರಲೋಕದ ತಂದೆಗೆ ಅನ್ವಯಿಸುವ "**ವಿಮೋಚಕನು,**" "**ರಕ್ಷಕನು**" ಮತ್ತು "**ಮೊದಲನೆಯವನು ಮತ್ತು ಕೊನೆಯವನು**" ಯೇಸುವಿಗೂ ಸಹ ಅನ್ವಯಿಸುತ್ತಿದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ–

**"ವಿಮೋಚಕನು" – ಯೋಬನು 19:25 : ಗಲಾತ್ಯ 3:13**

**"ರಕ್ಷಕನು" – 1 ಯೋಹಾನ 4:14**

**"ಮೊದಲನೆಯವನು ಮತ್ತು ಕೊನೆಯವನು" – ಪ್ರಕಟನೆ 22:13**

ತಂದೆ ಮತ್ತು ಮಗ ಇವರಿಬ್ಬರಿಗೂ ಒಂದೇ ಅನ್ವಯಿಸುವದರಿಂದ ಸತ್ಯವನ್ನು ನೋಡದೆಯಿರುವವರೆಲ್ಲರಿಗೂ ದೇವರ ವಾಕ್ಯವು ಅವರಿಗೆ ಎಡವಿ ಬೀಳುವಂತಾಗುವದು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೆಶಾಯ 28:13**

**"ಹೀಗಿರಲು ಯೆಹೋವನ ಮಾತು ಆಜ್ಞೆಯ ಮೇಲೆ ಆಜ್ಞೆ, ಆಜ್ಞೆಯ ಮೇಲೆ ಆಜ್ಞೆ, ಸೂತ್ರದ ಮೇಲೆ ಸೂತ್ರ, ಸೂತ್ರದ ಮೇಲೆ ಸೂತ್ರ, ಇಲ್ಲಿ ಸ್ವಲ್ಪ, ಅಲ್ಲಿ ಸ್ವಲ್ಪ ಎಂಬದಾಗಿ ಇವರಿಗೆ ಪರಿಣಮಿಸುವದು; ಇವರು ನಡೆದು ಹಿಂದೆ ಬಿದ್ದು ಭಂಗಪಡುವರು, ಬೋನಿಗೆ ಸಿಕ್ಕಿ ವಶವಾಗುವರು."**


**ಹೌದು! ಅನೇಕರು ವಂಚಿತರಾಗುತ್ತಾರೆ ಮತ್ತು ಸತ್ಯವನ್ನು ಕಾಣುವುದಿಲ್ಲ !**

**ಆದರೆ ಸತ್ಯ ಏನು ದೇವರ ಹೆಸರು ಮತ್ತು ನಾಮಧೇಯ ಯೇಸುವಿಗೂ ಸಹ ಏಕೆ ಅನ್ವಯಿಸುತ್ತದೆ?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದೋಣ–

**ಯೋಹಾನ 17:10**

"**ನನ್ನದೆಲ್ಲಾ ನಿನ್ನದೇ, ನಿನ್ನದೆಲ್ಲಾ (ಆತನ ಶಿಷ್ಯರು ಮತ್ತು..... ದೇವರ ಕೆಲವು ಹೆಸರುಗಳು ಮತ್ತು ನಾಮಧೇಯಗಳು ಸಹ)ನನ್ನದೇ; ಮತ್ತು ಇವರಿಂದ ನನಗೆ ಮಹಿಮೆ ಉಂಟಾಗಿದೆ.**"



ಹೌದು ! ಯೇಸು ಹೇಳುತ್ತಿರುವುದು ಏನೆಂದರೆ – ಆತನಲ್ಲಿರುವುದೆಲ್ಲವೂ ತಂದೆಯದ್ದು ಏಕೆಂದರೆ ಆತನು ತಂದೆಯ ಸೃಷ್ಟಿ ಮತ್ತು .......ಮಗನಾಗಿದ್ದಾನೆ ....ಆದರೆ ಆತನು ಇನ್ನೂ ಹೇಳುವುದೇನೆಂದರೆ –

**"ನಿನ್ನದೆಲ್ಲಾ ನನ್ನದೇ"**

......ಇದರ ಅರ್ಥ ತಂದೆಯ ಕೆಲವು ಹೆಸರು ಮತ್ತು ಮಹಿಮೆಯುಳ್ಳ ನಾಮಧೇಯ ಆತನಿಗೂ ಅನ್ವಯಿಸುತ್ತದೆ.

ಮತ್ತು ಯೇಸು ಹೇಳುವುದೇನೆಂದರೆ –

**“.....ಇವರಿಂದ ನನಗೆ ಮಹಿಮೆ ಉಂಟಾಗಿದೆ.”**

(ಹೌದು ! ಖಂಡಿತವಾಗಿಯು ಯೇಸುವು ತಂದೆಯಾದ ದೇವರ ಮಹತ್ವವಾದ ಕೆಲಸಗಳಲ್ಲಿ ಪಾಲುಗಾರನಾಗಿದ್ದಾರೆ!)

**ಏಕೆಂದರೆ ತಂದೆಯಾದ ದೇವರು ತನ್ನ ಎಲ್ಲಾ ಕೆಲಸಗಳಿಗೂ ಮೂಲಕರ್ತನಾಗಿದ್ದಾನೆ ಮತ್ತು.......**
**ಯೇಸು ಈ ಎಲ್ಲಾ ಕೆಲಸಗಳಿಗೂ ಕಾರ್ಯ ನಿರ್ವಾಹಕನಾಗಿದ್ದಾನೆ!!**

ಇದೆಲ್ಲವನ್ನು ತಿಳಿದ ಮೇಲೆಯು ನಿಮ್ಮ ಮನಸ್ಸಿನಲ್ಲಿ ಈ ವಿಷಯವನ್ನು ಕುರಿತು ಯಾವುದಾದರು ಗೊಂದಲವಿದ್ದರೆ ಕೆಳಕಂಡ ವಾಕ್ಯವನ್ನು ಓದೋಣ–

**ಧರ್ಮೋಪದೇಶಕಾಂಡ 6:4**

**“ಇಸ್ರಾಯೇಲ್ಯರೇ, ಕೇಳಿರಿ; ನಮ್ಮ ದೇವರಾದ ಯೆಹೋವನು ಒಬ್ಬನೇ ದೇವರು”**

ಹೌದು ! ನಮ್ಮ ದೇವರಾದ ಯೆಹೋವನು ಒಬ್ಬನೇ ಎಂದು ಇಸ್ರಾಯೇಲ್ಯರಿಗೆ ಘೋಷಿಸಿದ್ದನ್ನು ಯೇಸು ಪುನಃ ಹೇಳುವುದನ್ನು ಕೆಳಗಿನ ವಾಕ್ಯದಲಿ ಓದುತ್ತೇವೆ –

**ಮಾರ್ಕನು 12:29**

**“ಇಸ್ರಾಯೇಲ್ಯರೇ, ಕೇಳಿರಿ; ನಮ್ಮ ದೇವರಾದ ಯೆಹೋವನು ಒಬ್ಬನೇ ದೇವರು”**

ಇದು ಯೇಸು ಯೆಹೋವನನ್ನು ತನ್ನ ದೇವರೂ ಸಹ ಎಂದು ಹಕ್ಕು ಸಾಧಿಸುವುದನ್ನು ಸ್ಪಷ್ಟವಾಗಿ ತೋರಿಸುತ್ತದೆ!!

ಒಂದು ವೇಳೆ ಹಿಗಿಲ್ಲದ್ದಿದರೆ ಆತನು ಹೀಗೆನ್ನುತ್ತಿದನು– **"ಇಸ್ರಾಯೇಲ್ಯರೇ, ಕೇಳಿರಿ; ನಿಮ್ಮ ದೇವರಾದ ಯೆಹೋವನು ಒಬ್ಬನೇ ದೇವರು”**

**ಇಲ್ಲ! ಆತನು ಹಾಗೆ ಹೇಳಲ್ಲಿಲವೆಂದು ನಾವು ಗಮನಿಸತಕ್ಕದು!!**

ಈಗ ಪರಲೋಕ ತಂದೆಯ ಭಯಾನಕ ವಿಷಯಗಳನ್ನು ಕುರಿತು ಕೆಳಗಿನ ವಾಕ್ಯಗಳಲ್ಲಿ ಓದೋಣ –

**ಕೀರ್ತನೆ 147:4-5**

**"ಆತನು ನಕ್ಷತ್ರಗಳ ಸಂಖ್ಯೆಯನ್ನು ಗೊತ್ತುಮಾಡಿ ಪ್ರತಿಯೊಂದಕ್ಕೆ ಹೆಸರಿಟ್ಟಿದ್ದಾನೆ.**

ನಮ್ಮ ಕರ್ತನು ದೊಡ್ಡವನೂಪರಾಕ್ರಮಿಯೂ ಆಗಿದ್ದಾನೆ; ಆತನ ಜ್ಞಾನವು ಅಪರಿಮಿತವಾಗಿದೆ."

## ಯೋಬನು 38:31-32

"ನೀನು ಕೃತ್ತಿಕೆಯ ಸರಪಣಿಯನ್ನು ಬಿಗಿದು ಮೃಗಶಿರದ ಬಂಧವನ್ನು ಬಿಚ್ಚುವಿಯಾ? ಆಯಾ ಸಮಯದಲ್ಲಿ ನಕ್ಷತ್ರರಾಶಿಗಳನ್ನು ಬರಮಾಡುವಿಯೋ? ಸಪ್ತರ್ಷಿಗಳನ್ನು ಪರಿವಾರದೊಡನೆ ನಡಿಸುವಿಯಾ?"



ಹೌದು! ಯೆಹೋವ ದೇವರು, ಪರಲೋಕದ ತಂದೆಯು ಇಲ್ಲಿ ಕೊನೆಯಿಲ್ಲದ ವಿಶ್ವದಲ್ಲಿರುವ "**ನಕ್ಷತ್ರರಾಶಿ**" **(constellations)** ಮತ್ತು "**ಆಕಾಶ ಗಂಗೆ**" **(galaxies)**ಯನ್ನು ಕುರಿತು ಮಾತನಾಡುತ್ತಾರೆ ಮತ್ತು ಹೀಗೆ ಹೇಳುತ್ತಾರೆ

"....ಆತನು ನಕ್ಷತ್ರಗಳ ಸಂಖ್ಯೆಯನ್ನು ಗೊತ್ತುಮಾಡಿ ಪ್ರತಿಯೊಂದಕ್ಕೆ ಹೆಸರಿಟ್ಟಿದ್ದಾನೆ."

ವೈಜ್ಞಾನಿಕದ ಜ್ಞಾನದ ಬೆಳಕಿನಲ್ಲಿ ಈ ವಾಕ್ಯವನ್ನು ಕುರಿತು ನೋಡುವುದಾದರೆ ನಮ್ಮ ಮನಸ್ಸಿಗೆ ಈ ಬ್ರಹ್ಮಾಂಡದ ವಿಸ್ತರಣೆ ಮತ್ತು ಅದರೊಳಗಿರುವಂತಹ ನಕ್ಷತ್ರ ಮತ್ತು ನಕ್ಷತ್ರಗಳ ಕೂಟಗಳು.....

**.......ಸಂಪೂರ್ಣವಾಗಿ ದಿಗ್ಭ್ರಮೆಗೊಳಿಸುತ್ತದೆ.**

**ವಿಜ್ಞಾನದ ಪ್ರಕಾರ ನಮ್ಮ ಆಕಾಶಗಂಗೆಯಲ್ಲಿ ಒಂದು ನೂರು ಕೋಟಿ (1 Billion) (1,000,000,000) ನಕ್ಷತ್ರಗಳಿವೆ. (ಎಲ್ಲವೂ ನಮ್ಮ ಸೂರ್ಯನಂತಿವೆ, ಆಕಸ್ಮಿಕವಾಗಿ ಸೂರ್ಯನೂ ಸಹ ಒಂದು ನಕ್ಷತ್ರವಾಗಿದೆ) –**


ಪ್ರತಿಯೊಂದು ನಕ್ಷತ್ರ ಸಮೂಹದಲ್ಲಿ ಗ್ರಹಗಳು ಮತ್ತು ಚಂದ್ರಗಳೂ ಇವೆ!!

**ನೂರು ಕೋಟಿ ನಕ್ಷತ್ರಗಳಲ್ಲಿ ನಮ್ಮ ಸೂರ್ಯನೂ ಒಂದು!**

**ಊಹಿಸಿ ನೋಡಿರಿ!!**

ಮತ್ತು ಸೂರ್ಯನಿಗಿಂತ ಅನೇಕ **ಬಹು...... ಬಹು ದೊಡದ್ದಾದ ನಕ್ಷತ್ರಗಳು ಇದೆ!!**

**ಕೆಳಗೆ ನಮ್ಮ ಆಕಾಶಗಂಗೆ ನಕ್ಷತ್ರಗಳ ಸಮೂಹ ಮತ್ತು ಅದರಲ್ಲಿನ ನಮ್ಮ ಸೌರಮಂಡಲದ ಸ್ಥಾನವನ್ನು ಸೂಚಿಸುವಂತಹ ಒಂದು ಗ್ರಾಫಿಕ್ ಚಿತ್ರವನ್ನು ನೋಡುತ್ತೇವೆ!!**



ವಿಜ್ಞಾನಿಗಳು ನಮಗೆ ಹೇಳುವುದೇನೆಂದರೆ ಆಕಾಶಗಂಗೆ ನಕ್ಷತ್ರಗಳ ಸಮೂಹದಂತೆ ಸುಮಾರು **150** ನೂರುಕೋಟಿ **(150Billion)** ಯಷ್ಟು ಆಕಾಶಗಂಗೆ ಅಥವಾ ನಕ್ಷತ್ರಗಳ ಗುಂಪುಗಳಿವೆ – ಅನೇಕವು ಆಕಾಶಗಂಗೆಗಿಂತ ದೊಡ್ಡ, ಬಹು ದೊಡ್ಡದಾಗಿವೆ !

ಇದನ್ನು ನಾವು ಸಂಖ್ಯೆಯಲ್ಲಿ ನೋಡೋಣ – **150,000,000,000 (150** ನೂರುಕೋಟಿ ಆಕಾಶ **ಗಂಗೆಗಳು)!!!**

ನಾವು ಈ ಆಕಾಶಗಂಗೆಯ ನಕ್ಷತ್ರಗಳನ್ನು ಗುಣಾಕಾರ ಮಾಡಿದರೆ – ನಮಗೆ ಈ ಲೆಕ್ಕ ಸಿಗುತ್ತದೆ



**150,000,000,000,000,000,000.**

**ಇದು ಕೇವಲ ಊಹಿಸಿಕೊಂಡಿರುವ ಸಂಖ್ಯೆಯಾಗಿದೆ!!**

**ನಿಜವಾದ ಸಂಖ್ಯೆಯು ಇದಕ್ಕಿಂತ ಅಧಿಕ ಅಧಿಕವಾಗಿದೆ!**

**ನಮಗೆ ಹೇಳಿರುವ ಅಂಕಿಕ್ಷರವು ಕೊನೆಯಿಲ್ಲದ್ದಾಗಿವೆ!!!!**

**ಇಂತಹ ಯೋಚನೆಯನ್ನು ಊಹಿಸಿ ನೋಡಿರಿ!**

**ಸೃಷ್ಟಿಯೇ ಕೊನೆಯಿಲ್ಲದಾಗಿದ್ದರೆ ಸೃಷ್ಟಿಕರ್ತನು ಹೇಗಿರಬೇಕೆಂದು ಊಹಿಸಿ ನೋಡಿರಿ!!**

ಈಗ ಮತ್ತೆ ನಾವು ಆ ವಾಕ್ಯವನ್ನು ಧ್ಯಾನ ಮಾಡೋಣ–

**ಕೀರ್ತನೆ 147:4,5**

**"ಆತನು ನಕ್ಷತ್ರಗಳ ಸಂಖ್ಯೆಯನ್ನು ಗೊತ್ತುಮಾಡಿ ಪ್ರತಿಯೊಂದಕ್ಕೆ ಹೆಸರಿಟ್ಟಿದ್ದಾನೆ."**

**ಆಶ್ಚರ್ಯ! ನಿಮಗೆ ತಲೆಸುತ್ತುವಂತಿಲ್ಲವೆ?**

ಆದ್ದರಿಂದ ಮಹಾ ಯೆಹೋವ – ಪರಲೋಕದ ತಂದೆಯನ್ನು ಕುರಿತು ಹೀಗೆ ಬರೆದಿದೆ –

**ಕೀರ್ತನೆ 145:3 – "ಯೆಹೋವನು ಮಹೋನ್ನತನೂ ಮಹಾಸ್ತುತಿ ಪಾತ್ರನೂ ಆಗಿದ್ದಾನೆ; ಆತನ ಮಹತ್ತು ಅಪಾರವಾದದ್ದು."**

ಈಗ ನಮಗೆ ಬರುವ ಯೋಚನೆ ಏನೆಂದರೆ –

**['ಈ ವಿಸ್ತಾರವಾದ ಕೊನೆಯಿಲ್ಲದ ಮಹಾ ವಿಶ್ವದಲ್ಲಿ ಈ ಭೂಮಿ ಮತ್ತು ಮನುಷ್ಯನು ಎಷ್ಟರ ಮಾತ್ರದವನು'?]**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದೋಣ –

**ಯೆಶಾಯ 40:15**

**"ಆಹಾ, ಆತನ ಗಣನೆಯಲ್ಲಿ ಜನಾಂಗಗಳು ಕಪಿಲೆಯಿಂದುದುರುವ ತುಂತುರಿನಂತೆಯೂ ತ್ರಾಸಿನ ತಟ್ಟೆಯ ದೂಳಿನ ಹಾಗೂ ಇರುತ್ತವೆ; ಇಗೋ, ದ್ವೀಪಗಳನ್ನು ಅಣುರೇಣುವಿನಂತೆ ಎತ್ತುತ್ತಾನೆ."**

ಇಲ್ಲಿ ನಾವು ಓದುವುದೇನೆಂದರೆ ದೇಶಗಳ ಜನಾಂಗಗಳು –

**"…..ಕಪಿಲೆಯಿಂದುದುರುವ ತುಂತುರಿನಂತೆಯೂ"** (ಬಕೆಟ್ಟಿನ ಒಂದು ಹನಿ)

**"……ತ್ರಾಸಿನ (ತಕ್ಕಡಿ) ತಟ್ಟೆಯ ಧೂಳಿನ ಹಾಗೂ"**

**ದೇವರ ದೃಷ್ಟಿಯಲ್ಲಿ ಇಡೀ ವಿಶ್ವವನ್ನು ಹೋಲಿಸಿದಾಗ ಈ ಭೂಮಿಯು ಅಷ್ಟು ಚಿಕ್ಕದಾಗಿದೆ!**

ನೀವು ಹೀಗೆ ಕೇಳಬಹುದು, **ದೇವರು ಏಕೆ ಇಂತಹ ಹೋಲಿಕೆಯನ್ನು ಉಪಯೋಗಿಸುತ್ತಾರೆ?**

ಈಗ ನಾವು ದೇವರ ಮಹಾ ಭಯಾನಕ ವಿಶ್ವದಲ್ಲಿ ಮನುಷ್ಯ ಜಾತಿಯ ಹೀನಸ್ಥಿತಿಯನ್ನು ಪರಿಗಣಿಸಿ ಉತ್ತರವನ್ನು ನೋಡೋಣ…

ಈಗ ನಾವು ಇಡೀ ವಿಶ್ವವೇ ನಮ್ಮ ಭೂಮಿಯೆಂದು ಊಹಿಸೋಣ…

ಮತ್ತು ಎಲ್ಲಾ ವಿಧವಾದ ಭೂಮಿಯ ಜೀವಿಗಳು ದೇವರ ವಿಧವಿಧವಾದ ಸೃಷ್ಟಿಯೆಂದು ಊಹಿಸೋಣ.



ಈಗ ಈ ಎಲ್ಲಾ ಸೃಷ್ಟಿಗಳಲ್ಲಿ

**ಇರುವೆ ಜೀವಿಯನ್ನು ಪರಿಗಣಿಸೋಣ!**

**ಹೌದು! ಅವುಗಳು ಎಷ್ಟು ಸಣ್ಣದಾಗಿವೆ, ಆದರೂ ಅವುಗಳಿಗೆ ಕಣ್ಣುಗಳು, ಕೈಗಳು, ಕಾಲುಗಳು, ತಿಳುವಳಿಕೆ, ಮಾತುಗಳಿವೆ,**

**ನಿಶ್ಚಯವಾಗಿಯೂ! ಅವುಗಳದ್ದೇ ಒಂದು ಇರುವೆ ಲೋಕ!**

ಈಗ ಒಂದು ವೇಳೆ ಮನುಷ್ಯಜಾತಿಯೂ ಈ ಇರುವೆ ಲೋಕವನ್ನು **ಕುರಿತು ಒಂದು ಪುಸ್ತಕ ಬರೆಯಬೇಕೆಂದಿದ್ದರೆ** ಒಬ್ಬ ವ್ಯಕ್ತಿಯು ಮೊದಲು ಏನು ಮಾಡಬೇಕು?!

ಹೌದು! – ಮೊದಲು ಆ ವ್ಯಕ್ತಿಯು ಇರುವೆ ಲೋಕದ ಭಾಷೆ, ಪದ್ಧತಿ, ಸಂಪ್ರದಾಯಗಳನ್ನು ಕಲಿತುಕೊಳ್ಳಬೇಕು!

ಮತ್ತು ಆ ಇರುವೆ ಅರ್ಥಮಾಡಿಕೊಳ್ಳುವಂತಹ ಭಾಷೆಯನ್ನು ಉಪಯೋಗಿಸಿ ಒಬ್ಬ ವ್ಯಕ್ತಿಯು ಇರುವೆಯನ್ನು ಸಂಪರ್ಕಿಸಲು ಸಾಧ್ಯ ಮತ್ತು ಪುಸ್ತಕವನ್ನು ಬರೆದು ಇರುವೆ ಲೋಕವನ್ನು ಅರ್ಥಮಾಡಿಕೊಳ್ಳಲ್ಲು ಸಾಧ್ಯ!!

ಹೌದು! ದೇವರು ಮನುಷ್ಯಜಾತಿಗೆ ಪುಸ್ತಕವನ್ನು ಬರೆಯುವಾಗ ಇದೇ ರೀತಿ ಮಾಡಿದ್ದಾನೆ,

**ಆ ಪುಸ್ತಕವೇ - ಸತ್ಯವೇದವು!**

ಎಲ್ಲಾ ಮನುಷ್ಯ ಜಾತಿಯು ಅರ್ಥಮಾಡಿಕೊಳ್ಳುವ ಹಾಗೆ ದೇವರು ಇಂತಹ ಹೋಲಿಕೆಯನ್ನು ಉಪಯೋಗಿಸಿದ್ದಾನೆ!!!

**ಆದರೆ ಯೆಶಾಯ 40:15 ವಾಕ್ಯದಲ್ಲಿರುವ ಅರ್ಥವೇನು?**

**[ "ಕಪಿಲೆಯಿಂದುದುರುವ (ಬಕೆಟ್) ತುಂತುರಿನಂತೆಯೂ (ಹನಿ)" ]**

ಇದು ಪ್ರತಿದಿನ ನಾವು ಬಟ್ಟೆಯನ್ನು ಒಗೆಯುವಾಗ ಕಲಿತುಕೊಳ್ಳಬೇಕಾದ ಪಾಠವನ್ನು ಸೂಚಿಸುತ್ತದೆ!!

ಕಪಿಲೆಯನ್ನು ಸಾಮಾನ್ಯವಾಗಿ ಬಟ್ಟೆಯನ್ನು ಒಗೆದು ನೀರನ್ನು ಖಾಲಿ ಮಾಡಿದ ನಂತರ ಅದನ್ನು ಒಂದು ಮೂಲೆಯಲ್ಲಿ ತಲೆಕೆಳಗಾಗಿ ಇಡುವುದುಂಟು. ಆದರೂ ಒಬ್ಬ ವ್ಯಕ್ತಿ ಎಚ್ಚರಿಕೆಯಿಂದ ನೋಡಿದಾಗ ಆ ಬಕೆಟಿನ ಒಳಭಾಗದಲ್ಲಿ ಕೆಲವು ಹನಿ ನೀರು ಅಂಟಿಕೊಂಡಿರುತ್ತದೆ!!



ಯಾವ ವ್ಯಕ್ತಿಯಾಗಲಿ ಇದನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ ಮತ್ತು ಬಹುತೇಕ ಯಾರ ಗಮನಕ್ಕೂ ಬರುವುದಿಲ್ಲ!!

ಅದೇ ರೀತಿ ಕರ್ತನು ಈ ಭೂಮಿಯನ್ನು ಮತ್ತು ಅದರಲ್ಲಿರುವ ಮನುಷ್ಯರನ್ನು, ಅನೇಕ ಮತ್ತು ವಿಧವಿಧವಾದ ಸೃಷ್ಟಿಗಳಿರುವ ಇಡೀ ವಿಶ್ವಕ್ಕೆ ಹೋಲಿಸುತ್ತಾನೆ!

**...ಬಹುತೇಕ ಯಾರ ಗಮನಕ್ಕೂ ಬರುವುದಿಲ್ಲ!!**

**("ತ್ರಾಸಿನ ತಟ್ಟೆಯ ಧೂಳಿನ ಹಾಗೂ")**

ನಾವು ಪ್ರತಿದಿನ ಮಾರುಕಟ್ಟೆಯಲ್ಲಿ ಹಣ್ಣುತರಕಾರಿಗಳನ್ನು ಮತ್ತು ಆಹಾರ ವಸ್ತುಗಳನ್ನು ಖರೀದಿಸುವಾಗ ಈ ಪಾಠವನ್ನು ಕಲಿತುಕೊಳ್ಳುತ್ತೇವೆ.

ತರಕಾರಿಗಳನ್ನು ಖರೀದಿಸುವುದಕ್ಕೆ ಮುಂಚೆ ನಾವು ತಕ್ಕಡಿಯನ್ನು ಖಾಲಿ ಮಾಡುತ್ತೇವೆ, ಆದರೂ ಮನುಷ್ಯನ ಕಣ್ಣಿಗೆ ತಕ್ಕಡಿಯಲ್ಲಿನ ಧೂಳು ಕಾಣಿಸುವುದಿಲ್ಲ ಮತ್ತು



ಗಮನಿಸುವುದಿಲ್ಲ ಮತ್ತು ಇವು ಯಾವುದನ್ನೂ **ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ!**

ಇದೇ ರೀತಿ ದೇವರು ನಮಗೆ ಭೂಮಿಯನ್ನು ಮತ್ತು ಆತನ ವಿಶ್ವವನ್ನು ಮತ್ತು ಅದರಲ್ಲಿರುವ ಅನೇಕ ಸೃಷ್ಟಿಗಳನ್ನು ಹೋಲಿಸಿ ತೋರಿಸುತ್ತಾರೆ!!!!

ಹೌದು! **"…..ತ್ರಾಸಿನ ತಟ್ಟೆಯ ಧೂಳಿನ ಹಾಗೂ"**

**…..ಬಹುತೇಕವಾಗಿ ಯಾರ ಗಮನಕ್ಕೂ ಬರುವುದಿಲ್ಲ!!**

ಕೊನೆಯದಾಗಿ **ಯೆಶಾಯ** 40:17ನೇ ವಾಕ್ಯದಲ್ಲಿ ದೇವರ ಇಡೀ ವಿಶ್ವದಲ್ಲಿ **ಈ ಭೂಮಿಯ ಅಳತೆಯು ಗೊತ್ತಾಗುತ್ತದೆ** –

**"ಸಕಲ ಜನಾಂಗಗಳು ಆತನ ದೃಷ್ಟಿಯಲ್ಲಿ ಏನೂ ಇಲ್ಲದಂತಿದೆ, ಅವು ಆತನ ಎಣಿಕೆಯಲ್ಲಿ ಶುದ್ಧಶೂನ್ಯವೇ."**

**(ಕೆ.ಜೆ.ವಿ.ಯಲ್ಲಿ ಶೂನ್ಯಕ್ಕಿಂತ ಕಡಿಮೆ)**

ಹೌದು! ಇದು ಶೂನ್ಯಕ್ಕಿಂತ ಕಡಿಮೆಯಿರುವ ಅಳತೆಯನ್ನು ಸೂಚಿಸುತ್ತದೆ!

**ಊಹಿಸಿ ನೋಡಿರಿ, ಮನುಷ್ಯನ ಎಲ್ಲಾ ಮಹಿಮೆ ಮತ್ತು ಕೆಲಸಗಳು ಮತ್ತು ನಗರಗಳು ಮತ್ತು ಭೂಮಿಯ ಎಲ್ಲಾ ದೇಶಗಳು ಸೇರಿಸಿದರೆ, ದೇವರ ವಿಶ್ವವನ್ನು ಹೋಲಿಸುವಾಗ ಶೂನ್ಯಕ್ಕಿಂತ ಕಡಿಮೆಯಾಗಿದೆ!**

ಆದ್ದರಿಂದ ಮಹಾ ಯೆಹೋವನನ್ನು ಕುರಿತು ಈ ರೀತಿ ಬರೆಯುವುದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಯೆಶಾಯ 40:25,26

**"ಹೀಗಿರಲು ನನ್ನನ್ನು ಯಾರಿಗೆ ಹೋಲಿಸಿ ಸರಿಸಮಾನಮಾಡುತ್ತೀರಿ ಎಂದು ಸದಮಲಸ್ವಾಮಿಯು ಕೇಳುತ್ತಾನೆ. ನಿಮ್ಮ ಕಣ್ಣುಗಳನ್ನು ಮೇಲಕ್ಕೆತ್ತಿ ಕೊಂಡು ನೋಡಿರಿ! ಈ ನಕ್ಷತ್ರಗಳನ್ನು ಸೃಷ್ಟಿಸಿದಾತನು ಯಾರು? ಈ ಸೈನ್ಯವನ್ನು ಲೆಕ್ಕಕ್ಕೆಸರಿಯಾಗಿ ಮುಂದರಿಸುತ್ತಾನಲ್ಲಾ; ಎಲ್ಲವನ್ನೂ ಹೆಸರೆತ್ತಿ ಕರೆಯುತ್ತಾನೆ; ಆತನು ಅತಿ ಬಲಾಢ್ಯನೂ ಮಹಾಶಕ್ತನೂ ಆಗಿರುವದರಿಂದ ಅವುಗಳೊಳಗೆ ಒಂದೂ ಕಡಿಮೆಯಾಗದು."**

ಹೌದು! ರಾತ್ರಿಯ ಆಕಾಶವು ತನ್ನ ಸೃಷ್ಟಿಕರ್ತನ ಭಯಾನಕ ಮಹಿಮೆಯನ್ನು ಕುರಿತು ಪ್ರಚುರ ಪಡಿಸುತ್ತವೆ **(ಕೀರ್ತನೆ 19:1)**

**“ಆಕಾಶಗಳು ದೇವರ ಮಹಿಮೆಯನ್ನು ಸಾರುತ್ತವೆ; ಅಂತರಿಕ್ಷವು ಆತನ ಕೈ ಕೆಲಸ ವನ್ನು ತೋರಿಸುತ್ತದೆ.”**

**ಆತನ ಊಹಿಸಲು ಅಸಾಧ್ಯವಾದ ಶಕ್ತಿಯೆ ಸರ್ವಶಕ್ತಿ ಮತ್ತು ಯಾರು ಸಹ ದೇವರ ಯೋಜನೆಗೆ ವಿರೋಧವಾಗಿ ಕೆಲಸ ಮಾಡಲು ಸಾಧ್ಯವಿಲ್ಲ ಅಥವಾ ದೇವರ ಯೋಜನೆಯನ್ನು ನಿಷ್ಫಲಗೊಳಿಸಲು ಸಾಧ್ಯವಿಲ!**



ಇದನ್ನು ಕುರಿತು ಸ್ಪಷ್ಟವಾಗಿ ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ–

**ಯೆಶಾಯ 14:24,27; 46:10**

**"ಸೇನಾಧೀಶ್ವರನಾದ ಯೆಹೋವನು ಆಣೆಯಿಟ್ಟು ಹೇಳುವದೇನಂದರೆ – ನಾನು ಸಂಕಲ್ಪಿಸಿದ್ದೇ ನೆರವೇರುವದು, ಉದ್ದೇಶಿಸಿದ್ದೇ ನಿಲ್ಲುವದು, ಖಂಡಿತ. ಸೇನಾಧೀಶ್ವರನಾದ**

**ಯೆಹೋವನು ಉದ್ದೇಶಮಾಡಿದ್ದಾನೆ, ಅದನ್ನು ಯಾರು ವ್ಯರ್ಥಪಡಿಸುವರು? ಆತನ ಕೈಚಾಚಿದೆ, ಹಿಂದಕ್ಕೆ ತಳ್ಳುವವರು ಯಾರು?** ಎಂಬುದೇ."

**"ಆರಂಭದಲ್ಲಿಯೇ ಅಂತ್ಯವನ್ನು ತಿಳಿಸಿದ್ದೇನೆ; ನನ್ನ ಸಂಕಲ್ಪವು ನಿಲ್ಲುವದು, ನನ್ನ ಇಷ್ಟಾರ್ಥವನ್ನೆಲ್ಲಾ ನೆರವೇರಿಸುವೆನು** ಎಂದು **ಹೇಳಿ ಇನ್ನೂ ನಡೆಯದಿರುವ ಕಾರ್ಯಗಳನ್ನು ಪುರಾತನಕಾಲದಲ್ಲಿಯೇ ಅರುಹಿದ್ದೇನೆ."**

ಹೌದು! ನಾವು ನೋಡುವ ಎಲ್ಲಾ ಧಂಗೆಕೋರವು ಮತ್ತು ಕೆಟ್ಟತನವು ಮತ್ತು ಅವಿಧೇಯತ್ವವು

**........ಆತನ ಅನುಮತಿಯಿಂದಲೇ ಉಂಟಾಗಿದೆ.**

ಯಾಕೆಂದರೆ ನಾವು **ಯೆಶಾಯ 45:7**ರಲ್ಲಿ ಹೀಗೆ ಓದುತ್ತೇವೆ – **"ನಾನು ಬೆಳಕಿಗೂ ಕತ್ತಲಿಗೂ ಸೃಷ್ಟಿಕರ್ತನು, ಮೇಲನ್ನೂ ಕೇಡನ್ನೂ ಬರಮಾಡುವವನು, ಈ ಸಮಸ್ತ ಕಾರ್ಯಗಳನ್ನು ನಡೆಯಿಸುವ ಯೆಹೋವನು ನಾನೇ ಎಂದು ತಿಳಿದುಕೊಳ್ಳುವರು."**

ಹಾಗಾದರೆ ಈ ಮಹಾ ಕಣ್ಣಿಗೆ ಕಾಣದ ದೇವರನ್ನು "ಯಾವ ಮನುಷ್ಯನು ಕಾಣಲಾಗದ ದೇವರನ್ನು" **ಮನುಷ್ಯನು ಹೇಗೆ ತಿಳಿದುಕೊಳ್ಳಲು ಸಾಧ್ಯ?**

**ಆತನು....... ಯಾರ ಹಾಗೆ ಇದ್ದಾನೆ?**

**ನಾವು ಆತನನ್ನು ಹೇಗೆ ............ತಿಳಿದುಕೊಳ್ಳಬಹುದು?**

ಪ್ರಕಟನೆ ಪುಸ್ತಕದಲ್ಲಿ 4ನೇ ಅಧ್ಯಾಯದಲ್ಲಿ ಈ ಒಬ್ಬನೇ ಸತ್ಯ ದೇವರ ಚಿತ್ರಣವನ್ನು ಸಾಂಕೇತಿಕ ಭಾಷೆಯಲ್ಲಿ ಬರೆಯಲಾಗಿದೆ.

ಈ ದಿನ ನಾವು ಎರಡು ವಾಕ್ಯಗಳನ್ನು ಮಾತ್ರ ಅಭ್ಯಾಸ ಮಾಡೋಣ. ಆದರೆ ಉಳಿದ ವಿಷಯಗಳನ್ನು ನಿಧಾನವಾಗಿ ಎಲ್ಲಾ ವಾಕ್ಯಗಳನ್ನು ನಂತರ ಅಭ್ಯಾಸ ಮಾಡೋಣ.

ಈಗ ನಾವು ಕೆಳಗಿನ ವಾಕ್ಯವನ್ನು ಓದೋಣ–

## ಪ್ರಕಟನೆ 4:6,7

**"ಇದಲ್ಲದೆ ಸಿಂಹಾಸನದ ಮುಂದೆ ಸ್ಫಟಿಕಕ್ಕೆ ಸಮಾನವಾದ ಗಾಜಿನ ಸಮುದ್ರವಿದ್ದ ಹಾಗೆ ತೋಚಿತು. ಸಿಂಹಾಸನದ ಮಧ್ಯದಲ್ಲಿ ಅದರ ನಾಲ್ಕು ಕಡೆಗಳಲ್ಲಿ ನಾಲ್ಕು ಜೀವಿಗಳಿದ್ದವು; ಅವುಗಳಿಗೆ ಹಿಂದೆ ಮುಂದೆ ತುಂಬಾ ಕಣ್ಣುಗಳಿದ್ದವು."**

**ಇದರ ಅರ್ಥವೇನು? ಸಿಂಹಾಸನದಲ್ಲಿ ಕುಳಿತಿರುವವರು ಯಾರು?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ–

**ಪ್ರಕಟನೆ 5:13**

**"ಇದಲ್ಲದೆ ಆಕಾಶದಲ್ಲಿಯೂ ಭೂಮಿಯ ಮೇಲೆಯೂ ಭೂಮಿಯ ಕೆಳಗಿಯೂ ಸಮುದ್ರದ ಮೇಲೆಯೂ ಇರುವ ಎಲ್ಲಾ ಸೃಷ್ಟಿಗಳು ಅಂದರೆ ಭೂಮ್ಯಾಕಾಶಸಮುದ್ರಗಳೊಳಗೆ ಇರುವದೆಲ್ಲವೂ – ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ ಸ್ತೋತ್ರ ಮಾನ ಪ್ರಭಾವ ಆಧಿಪತ್ಯಗಳು ಯುಗ ಯುಗಾಂತರಗಳಲ್ಲಿಯೂ ಇರಲಿ ಎಂದು ಹೇಳುವದನ್ನು ಕೇಳಿದೆನು."**

**ಇಲ್ಲಿ 'ಯಜ್ಞದ ಕುರಿಯಾದಾತ' ಎಂದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನನ್ನು ಸೂಚಿಸುತ್ತದೆ ಹಾಗಾದರೆ 'ಸಿಂಹಾಸನಾಸೀನನು' ಯಾರಾಗಿರಬೇಕು?**

**ಹೌದು! ಅದು ಪರಲೋಕದ ತಂದೆಯೇ- ಸ್ವತಃ ಮಹಾ ಯೆಹೋವನೆ!**

"ಸಿಂಹಾಸನಾಸೀನನು" ಪರಲೋಕದ ತಂದೆಯನ್ನು ಸೂಚಿಸುತ್ತದೆ ಎಂದು ನೋಡಿದ ಮೇಲೆ, ಈಗ ನಾವು ವಾಕ್ಯದ ಅರ್ಥವನ್ನು ತಿಳಿದುಕೊಳ್ಳೋಕೆ ಪ್ರಯತ್ನಿಸೋಣ –

**[ "ಸಿಂಹಾಸನದ ಮಧ್ಯದಲ್ಲಿ" ]**

ಇದು ಸ್ವತಃ ದೇವರ ಏನೋ ತನ್ನೊಳಗಿನ ವಿಷಯವನ್ನು ಸೂಚಿಸುತ್ತದೆ!

**["ಸಿಂಹಾಸನದ ನಾಲ್ಕು ಕಡೆಗಳಲ್ಲಿ" ]**

ಇದು ದೇವರ ಸುತ್ತಲೂ ನಡೆಯುವ ವಿಷಯವನ್ನು ಸೂಚಿಸುತ್ತದೆ!

ಹೌದು! ಇದು ಆತನ ಎಲ್ಲಾ ಸೃಷ್ಟಿಯನ್ನು ಅಂದರೆ ಆತನ ಇಡೀ ವಿಶ್ವವನ್ನು ಕುರಿತು ಸೂಚಿಸುತ್ತದೆ!!

ಆದ್ದರಿಂದ ಇದು ಸ್ವತಃ ದೇವರ ತನ್ನೊಳಗಿನ ವಿಷಯ ಮತ್ತು ಆತನ ಸುತ್ತಲೂ ಇರುವ ಎಲ್ಲಾ ಸೃಷ್ಟಿ ಎರಡನ್ನೂ ಸಾಂಕೇತಿಕವಾಗಿ ಸೂಚಿಸುತ್ತದೆ!

**ಈ 'ನಾಲ್ಕು ಮೃಗಗಳು' ಅಥವಾ 'ನಾಲ್ಕು ಜೀವಿಗಳು' ಎಂದರೇನು?**

**ಇವು ದೇವರ ನಾಲ್ಕು ಗುಣಲಕ್ಷಣಗಳನ್ನು ಸೂಚಿಸುತ್ತದೆ.**

**ಇವು ಆತನಲ್ಲಿವೆ................ ಮತ್ತು ಆತನ ಎಲ್ಲಾ ಕ್ರಿಯೆಗಳಲ್ಲಿ ಮತ್ತು ಆತನ ಎಲ್ಲಾ ....................................ಸೃಷ್ಟಿಗಳಲ್ಲಿ ವ್ಯಕ್ತವಾಗುತ್ತದೆ**

**ಈ ಗುಣಲಕ್ಷಣಗಳು ಯಾವುದು?**

ಕೆಳಗಿನ ವಾಕ್ಯದ ಮೂಲಕ ಆ ನಾಲ್ಕು ಸಾಂಕೇತಿಕ ಗುಣಲಕ್ಷಣಗಳನ್ನು ಗುರುತಿಸಲು ಪ್ರಯತ್ನಿಸೋಣ–

**ಪ್ರಕಟನೆ 4:7**


**"ಮೊದಲನೆಯ ಜೀವಿಯು ಸಿಂಹದಂತಿತ್ತು; ಎರಡನೆಯ ಜೀವಿಯು ಹೋರಿಯಂತಿತ್ತು; ಮೂರನೆಯ ಜೀವಿಯ ಮುಖವು ಮನುಷ್ಯನ ಮುಖದಂತಿತ್ತು; ನಾಲ್ಕನೆಯ ಜೀವಿಯು ಹಾರುವ ಗರುಡ ಪಕ್ಷಿಯಂತಿತ್ತು."**

ಜೀವಿಗಳ "ಹೋಲಿಕೆಯು" ಗುಣಲಕ್ಷಣಗಳ ಗುರುತನ್ನು ಪ್ರಕಟಿಸುತ್ತದೆ.

ಈಗ ನಾವು ಅದನ್ನು ಒಂದೊಂದಾಗಿ ನೋಡೋಣ.

## ಗುಣಲಕ್ಷಣ # 1

**"ಮೊದಲನೆಯ ಜೀವಿಯು ಸಿಂಹದಂತಿತ್ತು..."**



"ಸಿಂಹವು' ಶಕ್ತಿಯನ್ನು ಸೂಚಿಸುತ್ತದೆ ಏಕೆಂದರೆ ಸಿಂಹವು ಕಾಡಿನ ರಾಜನಾಗಿದೆ ಮತ್ತು ಬಹಳ ಶಕ್ತಿಶಾಲಿಯಾಗಿದೆ.

**ನಿಜವಾಗಿಯೂ ದೇವರು ಮೊಟ್ಟಮೊದಲ ಸರ್ವಶಕ್ತನಾಗಿದ್ದಾನೆ!**


➡ ಜೀವ ನೀಡುವ ಶಕ್ತಿ ಮತ್ತು ಸೃಷ್ಟಿಸುವ ಶಕ್ತಿಯು ಆತನ ಅಪರಿಮಿತ ಶಕ್ತಿಯಲ್ಲಿ ಅಡಗಿದೆ.

ಆತನು ಏನೂ ಇಲ್ಲದಿರುವುದರಿಂದ ಎಲ್ಲವನ್ನೂ ಸೃಷ್ಟಿಸಬಲ್ಲನು ಮತ್ತು ಜೀವವಿಲ್ಲದಿರುವುದನ್ನು ಜೀವಂತವಾಗುವಂತೆ ಮಾಡಬಲ್ಲನು.

ನಿಜವಾಗಿಯೂ ದೇವರ ಮೊದಲ ಗುಣಲಕ್ಷಣವೇನೆಂದರೆ ಆತನು ಶಕ್ತಿಶಾಲಿ ಮತ್ತು ಸರ್ವಶಕ್ತನಾಗಿದ್ದಾನೆ ಮತ್ತು ಅದು ಇಡೀ ವಿಶ್ವದಲ್ಲೇ ಮತ್ತು ಪ್ರಕೃತಿಯಲ್ಲಿ ವ್ಯಕ್ತವಾಗುತ್ತದೆ.

## ಗುಣಲಕ್ಷಣ # 2

"ಎರಡನೆಯ ಜೀವಿಯು ಹೋರಿಯಂತಿತ್ತು..."



(ಇದು ಇಸ್ರಾಯೇಲ್ಯರಿಂದ ಪಾಪನಿವೃತ್ತಿ ಬಲಿಯ ಸಾಂಕೇತಿಕವಾಗಿದೆ.)

ಹೌದು! ಹೋರಿಯು ನ್ಯಾಯ ವಿಚಾರಣೆ (ಅಥವಾ ತೀರ್ಪನ್ನು) ಸೂಚಿಸುತ್ತದೆ.

ನಿಜವಾಗಿಯೂ ದೇವರು ತನ್ನ ನ್ಯಾಯವು ಪರಿಪೂರ್ಣವಾಗಿರುವದರಿಂದ ತನ್ನ ಎಲ್ಲಾ ಕ್ರಿಯೆಗಳಲ್ಲಿ ವ್ಯಕ್ತವಾಗುವಂತ ನ್ಯಾಯವನ್ನು ಒಳಪಡಿಸುತ್ತಾನೆ.


ಈ ದೇವರ ಗುಣಲಕ್ಷಣದಲ್ಲಿ ಪರಿಶುದ್ಧತ್ವ ಮತ್ತು ಪರಿಪೂರ್ಣತೆ ಎರಡೂ ಸೇರಿದೆ. ಇದಲ್ಲದೆ ನೀತಿನ್ಯಾಯಗಳೇ ದೇವರ ಸಿಂಹಾಸನದ ಅಸ್ತಿವಾರವೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ–

**ಕೀರ್ತನೆ 89:14 - "ನೀತಿನ್ಯಾಯಗಳು ನಿನ್ನ ಸಿಂಹಾಸನದ ಅಸ್ತಿವಾರವು;**

ನಿನ್ನ ಸ್ನಾನಿಧ್ಯದೂತರು ಪ್ರೀತಿಸತ್ಯತೆಗಳೇ."

## ಗುಣಲಕ್ಷಣ # 3

"ಮೂರನೆಯ ಜೀವಿಯ ಮುಖವು ಮನುಷ್ಯನ ಮುಖದಂತಿತ್ತು..."



ಇಲ್ಲಿ "ಮನುಷ್ಯನು" ಪ್ರೀತಿಯ ಸಾಂಕೇತಿಕವಾಗಿದೆ ಏಕೆಂದರೆ ದೇವರು ಮನುಷ್ಯನನ್ನು ಪ್ರೀತಿಯಲ್ಲಿ ಉತ್ತಮವಾದ ಗುಣವುಳ್ಳವನನ್ನಾಗಿ ಸೃಷ್ಟಿಸಿದನು. ಏಕೆಂದರೆ "ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಮತ್ತು ಹೋಲಿಕೆಗೆ ಸರಿಯಾಗಿ ಉಂಟು ಮಾಡಿದನು."

ಮತ್ತು ಇದನ್ನೇ ನಾವು ದೇವರನ್ನು ಕುರಿತು ಹೀಗೆ ಓದುತ್ತೇವೆ –

**1 ಯೋಹಾನ 4:8**

"ಪ್ರೀತಿಯು ಇರುವಲ್ಲಿ ಹೆದರಿಕೆಯಿಲ್ಲ. ಹೆದರಿಕೆಯು ಯಾತನೆಯನ್ನು ಹೊಂದುತ್ತಾ ಇರುವದು; ಪೂರ್ಣಪ್ರೀತಿಯು ಹೆದರಿಕೆಯನ್ನು ಹೊರಡಿಸಿಬಿಡುತ್ತದೆ. ಹೆದರುವವನು ಪ್ರೀತಿಯಲ್ಲ ಸಿದ್ಧಿಗೆ ಬಂದವನಲ್ಲ."

ಈ ಗುಣಲಕ್ಷಣಗಳಲ್ಲಿ ದಯೆ ಮತ್ತು ಕರುಣೆ ಸೇರಿದೆ ಮತ್ತು

**..........ತನ್ನ ಒಬ್ಬನೇ ಕುಮಾರನನ್ನು ಮನುಷ್ಯ ಜಾತಿಗೆ ರಕ್ಷಕನಾಗಲು ಕಳುಹಿಸಿರುವುದರಿಂದ ದೇವರ ಮಹಾ ಪ್ರೀತಿ ಎಷ್ಟಿದೆ ಎಂಬುದು ವ್ಯಕ್ತವಾಗುತ್ತದೆ.**

## ಗುಣಲಕ್ಷಣ # 4

"ನಾಲ್ಕನೆಯ ಜೀವಿಯು ಹಾರುವ ಗರುಡ ಪಕ್ಷಿಯಂತಿತ್ತು."



ಹಾರುವ ಗರುಡ ಪಕ್ಷಿಯು"
ಜ್ಞಾನವನ್ನು ಸೂಚಿಸುತ್ತದೆ.
ಏಕೆಂದರೆ ಹಾರುವ
ಗರುಡ ಪಕ್ಷಿಯು ತನ್ನ ತೀಕ್ಷ್ಣ
ದೃಷ್ಟಿಗೆ ಸಾಂಕೇತಿಕವಾಗಿದೆ.
ಮತ್ತು ಇದೂ
ಸಹ ಜ್ಞಾನವನ್ನು ಸೂಚಿಸುತ್ತದೆ.

**ನಿಜವಾಗಿಯೂ!!**

**ದೇವರು ಸಕಲ ಜ್ಞಾನಿಯಾಗಿದ್ದಾನೆ ಮತ್ತು ಆತನ ಜ್ಞಾನದಲ್ಲಿ ತಿಳುವಳಿಕೆ,.... ಯೋಜನೆ, ದೂರದೃಷ್ಟಿ.... ಮತ್ತು.... ಮುಂದಾಲೋಚನೆ ಸಹ ಸೇರಿದೆ (ಯೆಶಾಯ 46:10)**

ಮನುಷ್ಯನಿಗಾಗಿ ಇರುವ ದೇವರ ಯೋಜನೆಯಲ್ಲಿ ಇದು ವ್ಯಕ್ತವಾಗುತ್ತದೆ. ಇದು ಸತ್ಯವೇದದಲ್ಲಿನ ಆದಿಕಾಂಡದಿಂದ ಪ್ರಕಟನೆವರೆಗೂ ದಾಖಲಾಗಿದೆ!!

**ಆದ್ದರಿಂದ ಇವೆಲ್ಲವೂ ದೇವರ ನಾಲ್ಕು ನಿಯಮದ ಗುಣಲಕ್ಷಣಗಳನ್ನು ಸಾಂಕೇತಿಕವಾಗಿ ತೋರಿಸಲಾಗಿದೆ !**

**ನಂತರ ನಾವು 'ನಾಲ್ಕು ಜೀವಿಗಳ' ಬಗ್ಗೆ ಇನ್ನೇನು ಓದುತ್ತೇವೆ?**

........**"ಆ ಜೀವಿಗಳಿಗೆ ಸುತ್ತಲೂ ಒಳಗೂ ತುಂಬಾ ಕಣ್ಣುಗಳಿದ್ದವು."**

**ಇದರ ಅರ್ಥವೇನು?**

ತಲೆಯಲ್ಲಿ ಎರಡು ಕಣ್ಣುಗಳಿರುವಾಗ ಒಂದು ಮಿತಿಯಿರುತ್ತದೆ.
ತಲೆಯ ಹಿಂಭಾಗದಲ್ಲಿ ಇನ್ನೆರಡು ಕಣ್ಣುಗಳು ಹೆಚ್ಚಾದಾಗ ಮತ್ತು ಇನ್ನೂ ಕೆಲವು ಕಣ್ಣುಗಳು ಹೆಚ್ಚಾದಾಗ.... ದೃಷ್ಟಿಯ ಮಿತಿ ಹೆಚ್ಚಾಗುತ್ತದೆ. ಅದೇ ರೀತಿ ಎಲ್ಲಾ ಕಡೆಗೂ ಇರುವ ಕಣ್ಣುಗಳು....

ಅನಿಯಮಿತ ಅಥವಾ ಮಿತಿಯೇ ಇಲ್ಲದಿರುವುದನ್ನು ಸೂಚಿಸುತ್ತದೆ.

ಮತ್ತು ನಿಜವಾಗಿಯೂ ದೇವರ ಶಕ್ತಿ, ನ್ಯಾಯ ನೀತಿ, ಪ್ರೀತಿ ಮತ್ತು ಜ್ಞಾನವು ಮಿತಿಯಿಲ್ಲದಾಗಿದೆ.

ಮತ್ತು ಯೇಸುವಿಗೆ ಇದರ ಬಗ್ಗೆ ಎಷ್ಟು ಚೆನ್ನಾಗಿ ತಿಳಿದಿತ್ತೆಂದರೆ ನಾವು ಆತನ ವಾಕ್ಯದಲ್ಲಿ ಹೀಗೆ ಓದುತ್ತೇವೆ–

**ಮಾರ್ಕನು 10:17-18**

**“ಆತನು ಹೊರಟು ದಾರಿಹಿಡಿದು ಹೋಗುವಾಗ ಒಬ್ಬನು ಓಡುತ್ತಾ ಆತನ ಎದುರಿಗೆ ಬಂದು ಮೊಣಕಾಲೂರಿ – ಒಳ್ಳೇ ಬೋಧಕನೇ, ನಾನು ನಿತ್ಯಜೀವಕ್ಕೆ ಬಾಧ್ಯಸ್ಥನಾಗಬೇಕಾದರೆ ಏನು ಮಾಡಬೇಕೆಂದು ಆತನನ್ನು ಕೇಳಲಾಗಿ ಯೇಸು ಅವನಿಗೆ – ನನ್ನನ್ನು ಒಳ್ಳೆಯವನೆಂದು ಯಾಕೆ ಹೇಳುತ್ತೀ? ದೇವರೊಬ್ಬನೇ ಹೊರತು ಮತ್ತಾವನೂ ಒಳ್ಳೆಯವನಲ್ಲ.”**

ಇಲ್ಲಿ ಯೇಸು ದೇವರ ಒಳ್ಳೆತನದ ಮೂಲವನ್ನು ಒಪ್ಪಿಕೊಳ್ಳುವದನ್ನು ನೋಡುತ್ತೇವೆ.

**ಏಕೆಂದರೆ ದೇವರಲ್ಲಿ ಎಲ್ಲಾ ಪರಿಪೂರ್ಣತೆ ಮತ್ತು ಎಲ್ಲಾ ಗುಣಮಟ್ಟ ಮತ್ತು ಗುಣಲಕ್ಷಣ ಬುಗ್ಗೆಗಳ ಮೂಲವಿದೆ!**

ಮತ್ತು ಇದೇ ನಾಲ್ಕು ಗುಣಲಕ್ಷಣಗಳನ್ನು ದೇವರು ಮನುಷ್ಯನಲ್ಲಿ ಇಟ್ಟಿದ್ದಾನೆ ಏಕೆಂದರೆ ನಾವು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ. –

**ಆದಿಕಾಂಡ 1:26,27**

**"ಆ ಮೇಲೆ ದೇವರು – ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡೋಣ; ಅವರು ಸಮುದ್ರದಲ್ಲಿರುವ ಮಿನುಗಳ ಮೇಲೆಯೂ ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ ಪಶುಗಳ ಮೇಲೆಯೂ ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಕೀಟಗಳ ಮೇಲೆಯೂ ಎಲ್ಲಾ ಭೂಮಿಯ ಮೇಲೆಯೂ ದೊರೆತನಮಾಡಲಿ ಅಂದನು. ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು; ದೇವಸ್ವರೂಪದಲ್ಲಿ ಅವನನ್ನು ಉಂಟುಮಾಡಿದನು; ಅವರನ್ನು ಗಂಡುಹೆಣ್ಣಾಗಿ ನಿರ್ಮಿಸಿದನು.”**

ಹೌದು! ಇಲ್ಲಿ "ದೇವರ ಸ್ವರೂಪ"ದಲ್ಲಿ ಎಂಬುದು ದೇವರು ಮನುಷ್ಯನಲ್ಲಿ ಇಟ್ಟಿರುವ ನಾಲ್ಕು ಗುಣಲಕ್ಷಣಗಳ ಆಳತೆಯನ್ನು ಸೂಚಿಸುತ್ತದೆ.

ಪಾಪ ಮತ್ತು ಸ್ವಾರ್ಥತೆಗಳು ಮನುಷ್ಯನನ್ನು ತುಕ್ಕು ಹಿಡಿದಿರುವಂತೆ ಮಾಡಿದ್ದರೂ ಇಂದಿಗೂ ಸಹ ಅವರಲ್ಲಿ ಈ ಗುಣಲಕ್ಷಣಗಳನ್ನು ಕಾಣಬಹುದು!!

ಈಗ ನಾವು ಈ ಗುಣಲಕ್ಷಣಗಳು ಮನುಷ್ಯನಲ್ಲಿರುವದನ್ನು ನೋಡೋಣ–

# ಶಕ್ತಿ

ಮನುಷ್ಯನು ಮಾಡುವಂತಹ ಕೆಲಸಗಳನ್ನು ನೋಡಿರಿ!!!



ಬೇರೆ ಯಾವ ಸೃಷ್ಟಿಯೂ ಮನುಷ್ಯನು ಈ ಭೂಮಿಯಲ್ಲಿ ಮಾಡುವಂತಹ ಕಟ್ಟಡ, ತಯಾರಿಕೆ, ಸಾಗಣಿಕೆ, ತಂತ್ರಜ್ಞಾನ ಇತರೆ, ಇತರೆಗಳಂತಹ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲ.

# ನ್ಯಾಯನೀತಿ

ನ್ಯಾಯಾಲಯಗಳೇ ಇದಕ್ಕೆ ಸಾಕ್ಷಿಯಾಗಿದೆ



## ಪ್ರೀತಿ

ವರ್ಷಾನುವರ್ಷಗಳಿಂದ ಸ್ವಾರ್ಥದಿಂದ ತುಕ್ಕು ಹಿಡಿದಿದ್ದರೂ ಸಹ ಈ ಪ್ರೀತಿಯ ಗುಣಲಕ್ಷಣಗಳು ಮನುಷ್ಯನಲ್ಲಿ ಕಾಣುತ್ತವೆ.




ಉದಾಹರಣೆಗೆ : ಅರಾಜಕತೆ ಮತ್ತು ಯುದ್ಧದಿಂದ ಸಿರಿಯಾ ದೇಶದಲ್ಲಿ ಮೂಲಭೂತ ಮಾನವ ಹಕ್ಕನ್ನು ಸಹ ನಿರಾಕರಿಸಿಸಲ್ಪಟ್ಟ ಆಶ್ರಯಸ್ಥರಿಗೆ ಅನೇಕ ದೇಶಗಳು ತಮ್ಮ ಅಗಾಧವಾದ ಸಹಾಯ ಅಸ್ತವನ್ನು ಚಾಚಿದರು.

## ಜ್ಞಾನ

ಬೇರೆ ಬೇರೆ ಕ್ಷೇತ್ರಗಳ ಮನುಷ್ಯನ ಅರಿವು ನಿಜವಾಗಿಯೂ ಮನಸ್ಸನ್ನು ದಿಗಿಲುಗೊಳಿಸುತ್ತದೆ–

**ವಾಸ್ತುಶಿಲ್ಪ, ರಸಾಯನಶಾಸ್ತ್ರ, ಭೌತಶಾಸ್ತ್ರ, ಜೀವಶಾಸ್ತ್ರ, ಔಷಧಿಶಾಸ್ತ್ರ, ಯಂತ್ರಶಾಸ್ತ್ರ, ಸಸ್ಯಶಾಸ್ತ್ರ, ಗಣಿತಶಾಸ್ತ್ರ, ತಂತ್ರಜ್ಞಾನ, ಇತರೆ ಇತರೆ.**



**ನಿಜವಾಗಿಯೂ! ಮನುಷ್ಯನಿಗೆ ದೇವರ ನಾಲ್ಕು ಗುಣಲಕ್ಷಣಗಳು ಕೊಡಲ್ಪಟ್ಟಿದೆ!**

**ಆದರೆ! ದೇವರು ಮನುಷ್ಯನಿಗೆ ಎಷ್ಟು ಕೊಟ್ಟಿದ್ದಾನೆ?**

ಆಹಾ! ದೇವರು ಮನುಷ್ಯನಲ್ಲಿ ಇಟ್ಟಿರುವ ಈ ನಾಲ್ಕು ಗುಣಲಕ್ಷಣಗಳ "ಅಳತೆಯನ್ನು" ನಾವು ಸಾಗರದ ತೀರದಲ್ಲಿ ಹೋಗಿ ಗ್ರಹಿಸಿಕೊಳ್ಳಬಹುದು!

ಸಾಗರ ಮತ್ತು ಅದರಲ್ಲಿರುವ ನೀರಿನ ಅಳತೆಯನ್ನು ನೋಡಿ ದೇವರ ಮಿತಿಯಿಲ್ಲದ ಗುಣಲಕ್ಷಣಗಳನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು, ಏಕೆಂದರೆ ನಾವು ಸಾಗರದಲ್ಲಿರುವ ನೀರನ್ನು ಅಳತೆ ಮಾಡಲಾಗುವುದಿಲ್ಲ!!!!

ಚಹದ(ಟೀ) ಲೋಟವನ್ನು ತೆಗೆದುಕೊಂಡು ಸಾಗರದ ನೀರಲ್ಲಿ ಮುಗ್ಗರಿಸಿ ತೆಗೆದರೆ ಎಷ್ಟು ಅಳತೆಯ ನೀರು ಬರುತ್ತದೋ ಮನುಷ್ಯನ ಗುಣಲಕ್ಷಣಗಳ ಅಳತೆ ಅಷ್ಟಿರುತ್ತದೆ!!!!

ಸಾಗರದ ನೀರಲ್ಲಿ ಒಂದು ಚಹದ(ಟೀ) ಲೋಟದ ನೀರು....
ಮನುಷ್ಯನಲ್ಲಿಟ್ಟಿರುವ ದೇವರ
ಗುಣಲಕ್ಷಣಗಳ ಅಳತೆಯನ್ನು ಸೂಚಿಸುತ್ತದೆ!!!

**ನೀವು ದೇವರ ಮಿತಿಯಿಲ್ಲದ ಶಕ್ತಿ ಮತ್ತು ನ್ಯಾಯನೀತಿ, ಪ್ರೀತಿ ಮತ್ತು ಜ್ಞಾನವನ್ನು ಊಹಿಸಬಲ್ಲಿರಾ!?**



ನಂತರ ನಾವು ಪರಲೋಕದ ತಂದೆಯ ಗುಣಲಕ್ಷಣಗಳಲ್ಲಿ ಇನ್ನೊಂದು ವಿಷಯವನ್ನು ಕುರಿತು ಹೀಗೆ ಓದುತ್ತೇವೆ–

**ಯೆಹೆಜ್ಕೇಲನು 1:16**

**"ಆ ಚಕ್ರಗಳ ವರ್ಣವೂ ರಚನೆಯೂ ಹೇಗಿದ್ದವಂದರೆ – ಅವುಗಳ ವರ್ಣವು ಪೀತರತ್ನದ ಹಾಗೆ ಥಳ ಥಳಸುತ್ತಿತ್ತು. ಒಂದು ಚಕ್ರದೊಳಗೆ ಇನ್ನೊಂದು ಚಕ್ರವು [ಅಡ್ಡವಾಗಿ] ರಚಿಸಿದಂತಿತ್ತು; ಆ ನಾಲ್ಕು ಚಕ್ರಗಳು ಒಂದೇ ಮಾದರಿಯಾಗಿದ್ದವೂ."**

## ಇದರ ಅರ್ಥವೇನು?

ಇದು ಸಾಂಕೇತಿಕ ಚಿತ್ರವಾಗಿದ್ದು ಎಲ್ಲಾ ನಾಲ್ಕು ಗುಣಲಕ್ಷಣಗಳು ಹೊಂದಾಣಿಕೆಯಿಂದ ಕೆಲಸ ಮಾಡುತ್ತಿದ್ದವು. ನಾಲ್ಕು ಚಕ್ರಗಳು ಒಂದರೊಳಗೆ ಇನ್ನೊಂದು ಚಕ್ರವನ್ನು ರಚಿಸಿದಂತಿತ್ತು. ಇದು ದೇವರ ನಾಲ್ಕು ಗುಣಲಕ್ಷಣಗಳು ಹೇಗೆ ಒಂದಾಗಿ ಕೆಲಸ ಮಾಡುತ್ತದೆ ಎಂಬುದನ್ನು ಸೂಚಿಸುತ್ತದೆ.

ಉದಾ: ಶಕ್ತಿಯನ್ನು ಪ್ರಯೋಗಿಸುವಾಗ, ಅದೇ ಸಮಯದಲ್ಲಿ

**...."ಪ್ರೀತಿ", "ನ್ಯಾಯನೀತಿ" ಮತ್ತು "ಜ್ಞಾನ" ಶಕ್ತಿ ಸಹ ತಮ್ಮ ಕಾರ್ಯವನ್ನು ನಿರ್ವಹಿಸುತ್ತದೆ!!**

ಒಂದು ವೇಳೆ ದೇವರ ಪ್ರೀತಿ ಪ್ರಯೋಗಿಸಿದರೆ ಅದು... "ಶಕ್ತಿಯುಳ್ಳ" "ಜ್ಞಾನ" ಮತ್ತು "ನ್ಯಾಯನೀತಿ"ಯುಳ್ಳ ಪ್ರೀತಿಯಾಗಿರುತ್ತದೆ!!

ದೇವರ ದೈವೀಕ ಯೋಜನೆಯಲ್ಲಿ.... ಚಕ್ರವು ಕಾಲವನ್ನು (ಕಾಲಾಂತರವನ್ನು) ಸೂಚಿಸುತ್ತದೆ. ದೇವರ ಈ ಯೋಜನೆಯ ಮೂಲಕ ಆತನ ಗುಣಲಕ್ಷಣಗಳು ವ್ಯಕ್ತವಾಗುವಂತೆ ಮಾಡುತ್ತದೆ.

ಕೆಳಗಿನ ಗಾದೆಯನ್ನು ನೀವು ಕೇಳಿಲ್ಲವೇ–

**"ಕಾಲ ಚಕ್ರವು ಉರುಳುತ್ತಲಿದೆ...."**

**ಓಹ್! ಈ ವಿಶ್ವದ ಮಹಾದೇವರು ನಿಜವಾಗಿಯೂ ಎಷ್ಟು ದೊಡ್ಡ ಮತ್ತು ಶ್ರೇಷ್ಟವುಳ್ಳವರಾಗಿದ್ದಾರೆ.**

ಆತನ ಪರಿಶುದ್ಧ ನಾಮವನ್ನು ಸ್ತುತಿಸುವ ಪೂರ್ತಿಯುಳ್ಳ ಕೀರ್ತನೆಯು ಸಮರ್ಪಿತವಾಗಿದೆ!! ಇದನ್ನು ಕೆಳಗಿನ ವಾಕ್ಯದಲ್ಲಿ ಓದೋಣ–

## ಕೀರ್ತನೆ 145:8-21

"ಯೆಹೋವನು ದಯೆಯೂ ಕನಿಕರವೂ ಉಳ್ಳವನು; ದೀರ್ಘಶಾಂತನೂ ಪ್ರೀತಿಪೂರ್ಣನೂ ಆಗಿದ್ದಾನೆ. ಯೆಹೋವನು ಸರ್ವೋಪಕಾರಿಯೂ ತಾನು ನಿರ್ಮಿಸಿದವುಗಳನ್ನೆಲ್ಲಾ ಕರುಣಿಸುವಾತನೂ ಆಗಿದ್ದಾನೆ. ಯೆಹೋವನೇ, ನಿನ್ನ ಸೃಷ್ಟಿಯೆಲ್ಲವು ನಿನ್ನನ್ನು ಸ್ತುತಿಸುವದು; ನಿನ್ನ ಭಕ್ತರು ನಿನ್ನನ್ನು ಕೊಂಡಾಡುವರು. ಅವರು ನಿನ್ನ ರಾಜ್ಯಮಹತ್ತನ್ನು ಪ್ರಸಿದ್ಧಪಡಿಸುವರು; ನಿನ್ನ ಪ್ರತಾಪವನ್ನು ವರ್ಣಿಸುವರು. ಹೀಗೆ ಮಾನವರು ನಿನ್ನ ಶೂರಕೃತ್ಯಗಳನ್ನೂ ನಿನ್ನ ರಾಜ್ಯದ ಮಹಾಪ್ರಭಾವವನ್ನೂ ಗ್ರಹಿಸಿ ಕೊಳ್ಳುವರು. ನಿನ್ನ ರಾಜ್ಯವು ಶಾಶ್ವತವಾಗಿದೆ, ನಿನ್ನ ಆಳಿಕೆಯು ತಲತಲಾಂತರಕ್ಕೂ ಇರುವದು. ಯೆಹೋವನು ಬಿದ್ದವರನ್ನೆಲ್ಲಾ ಎತ್ತುವವನೂ ಕುಗ್ಗಿದವರನ್ನೆಲ್ಲಾ ಉದ್ಧರಿಸುವವನೂ ಆಗಿದ್ದಾನೆ. ಯೆಹೋವನೇ, ಎಲ್ಲಾ ಜೀವಿಗಳ ಕಣ್ಣುಗಳು ನಿನ್ನನ್ನೇ ನೋಡುತ್ತವೆ. ನೀನು ಅವುಗಳಿಗೆ ಹೊತ್ತುಹೊತ್ತಿಗೆ ಆಹಾರಕೊಡುತ್ತೀ. ನೀನು ಕೈದೆರೆದು ಎಲ್ಲಾ ಜೀವಿಗಳ ಇಷ್ಟವನ್ನು ನೆರವೇರಿಸುತ್ತೀ. ಯೆಹೋವನ ಮಾರ್ಗಗಳೆಲ್ಲಾ ನೀತಿಯುಳ್ಳವುಗಳು; ಆತನು ಎಲ್ಲಾ ಕಾರ್ಯಗಳಲ್ಲಿ ಕೃಪೆತೋರಿಸುವವನು. ಯೆಹೋವನಿಗೆ ಮೊರೆಯಿಡುವವರು ಯಥಾರ್ಥವಾಗಿ ಮೊರೆಯಿಡುವದಾದರೆ ಆತನು ಹತ್ತಿರವಾಗಿಯೇ ಇದ್ದಾನೆ. ತನ್ನಲ್ಲಿ ಭಯಭಕ್ತಿಯುಳ್ಳವರ ಇಷ್ಟವನ್ನು ನೆರವೇರಿಸುತ್ತಾನೆ; ಅವರ ಕೂಗನ್ನು ಕೇಳಿ ರಕ್ಷಿಸುತ್ತಾನೆ. ಯೆಹೋವನು ತನ್ನನ್ನು ಪ್ರೀತಿಸುವವರೆಲ್ಲರನ್ನು ಕಾಪಾಡುತ್ತಾನೆ; ಆದರೆ ಎಲ್ಲಾ ದುಷ್ಟರನ್ನು ಸಂಹರಿಸುತ್ತಾನೆ. ನನ್ನ ಬಾಯಿಯೆಹೋವನನ್ನು ಕೀರ್ತಿಸುವದು; ಎಲ್ಲಾ ಜೀವಿಗಳು ಆತನ ಪರಿಶುದ್ಧನಾಮವನ್ನು ಯುಗಯುಗಾಂತರಗಳಲ್ಲಿಯೂ ಕೊಂಡಾಡಲಿ."

ಹೌದು! ಇದು ತನ್ನ ಎಲ್ಲಾ ಜೀವಸೃಷ್ಟಿಗಳ ಮೇಲೆ ಮಹಾ ಯೆಹೋವ ದೇವರು ತೋರಿಸುವ ಕರುಣೆ, ದಯೆ ಮತ್ತು ಆತನ ಅನುಗ್ರಹಕ್ಕಾಗಿ ಕಾಣಿಕೆಯಾಗಿದೆ.

ಆದರೆ ಈ ಲೋಕದಲ್ಲಿರುವವರು ಮತ್ತು ಹೆಸರಿಗೆ ಮಾತ್ರ ಕ್ರೈಸ್ತರಾಗಿರುವವರು ಇನ್ನೂ ಕಾಯಬೇಕಾಗಿದೆ!!!!

ಆದರೆ ಭವಿಷ್ಯದಲ್ಲಿ ಅವರು ಈ ಸತ್ಯವನ್ನು ಪಡೆದುಕೊಂಡಾಗ ಅವರ ಪ್ರತಿಕ್ರಿಯೆ ಹೇಗಿರುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ–

## ಪ್ರಕಟನೆ 5:13 ; ಯೆಶಾಯ 25:9

"ಇದಲ್ಲದೆ ಆಕಾಶದಲ್ಲಿಯೂ ಭೂಮಿಯ ಮೇಲೆಯೂ ಭೂಮಿಯ ಕೆಳಗಿಯೂ ಸಮುದ್ರದ ಮೇಲೆಯೂ ಇರುವ ಎಲ್ಲಾ ಸೃಷ್ಟಿಗಳು ಅಂದರೆ ಭೂಮ್ಯಾಕಾಶಸಮುದ್ರಗಳೊಳಗೆ

**ಇರುವದೆಲ್ಲವೂ – ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ ಸ್ತೋತ್ರ ಮಾನ ಪ್ರಭಾವ ಆಧಿಪತ್ಯಗಳು ಯುಗ ಯುಗಾಂತರಗಳಲ್ಲಿಯೂ ಇರಲಿ ಎಂದು ಹೇಳುವದನ್ನು ಕೇಳಿದೆನು."**

**"ಆ ದಿನದಲ್ಲಿ ಜನರು – ಆಹಾ, ಈತನೇ ನಮ್ಮ ದೇವರು, ನಮ್ಮನ್ನು ರಕ್ಷಿಸಲಿ ಎಂದು ಈತನನ್ನು ನಿರೀಕ್ಷಿಸಿ ಕೊಂಡಿದ್ದೇವೆ; ಈತನೇ ಯೆಹೋವನು, ಈತನನ್ನು ನಿರೀಕ್ಷಿಸಿಕೊಂಡಿದ್ದೇವೆ, ಈತನ ರಕ್ಷಣೆಯಲ್ಲಿ ಆನಂದಿಸಿ ಉಲ್ಲಾಸಪಡುವೆವು** ಎಂದು **ಹೇಳಿಕೊಳ್ಳುವರು"**

**ಹೌದು! ತಕ್ಕ ಕಾಲದಲ್ಲಿ ಇಡೀ ಲೋಕವು ಆತನ ಪರಿಶುದ್ಧ ನಾಮವನ್ನು ಸ್ತುತಿಸುವುದು!!**

**ಹೌದು ಪ್ರೀತಿಯ ಸಹೋದರ ಮತ್ತು ಸಹೋದರಿಯರೆ!!**
**ಇಂದು ನಾವು ಇಡೀ ವಿಶ್ವದ ಮಹಾ ಭಯಾನಕ ಮಹಿಮೆಯುಳ್ಳ ಸರ್ವಶಕ್ತನಾದ ದೇವರ ಬಗ್ಗೆ ಒಂದು ಚಿಕ್ಕ ಪರಿಚಯ ಮಾಡಿಕೊಂಡಿದ್ದೇವೆ.**

ಪರಲೋಕದ ತಂದೆಯನ್ನು ಕುರಿತು ಪೂರ್ತಿಯಾಗಿ ತಿಳಿದುಕೊಳ್ಳಬೇಕಾದರೆ ನಮಗೆ ಮಿತಿಯಿಲ್ಲದ ಜೀವನಕಾಲ ಬೇಕಾಗುತ್ತದೆ!!

**ಯೋಹಾನ 17:3 – "ಒಬ್ಬನೇ ಸತ್ಯ ದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿಕೊಟ್ಟ ಯೇಸು ಕ್ರಿಸ್ತನನ್ನು ತಿಳಿಯುವದೇ ನಿತ್ಯ ಜೀವವು."**

ಇದರ ಅರ್ಥ ಏನೆಂದರೆ ಸಾವಿರ ವರ್ಷಗಳ ಜೀವನ ಕಾಲದಲ್ಲಿ ನಾವು ದೇವರನ್ನು ಕುರಿತು ಸ್ವಲ್ಪ ಮಾತ್ರವೇ ತಿಳಿಯಲು ಸಾಧ್ಯ, ಆದರೆ......
ಒಂದು ನೂರು ಸಾವಿರ ವರ್ಷಗಳಲ್ಲಿ ಇನ್ನೂ ಚೆನ್ನಾಗಿ ತಿಳಿಯಬಹುದು ಮತ್ತು ಒಂದು ನೂರು ದಶಲಕ್ಷ ವರ್ಷಗಳಲ್ಲಿ ಇನ್ನೂ ಹೆಚ್ಚಾಗಿ ತಿಳಿಯಬಹುದು ಮತ್ತು........ ಮತ್ತು ಒಂದು ನೂರು ಶತಕೋಟಿ ವರ್ಷಗಳಲ್ಲಿ ಇನ್ನೂ ಅಧಿಕ, ಅಧಿಕ ಹೆಚ್ಚಾಗಿ ತಿಳಿಯಬಹುದು ಮತ್ತು... ಹೌದು!
ದೇವರನ್ನು ಪೂರ್ಣವಾಗಿ ತಿಳಿಯಬೇಕಾದರೆ ನಾವು...... ನಿತ್ಯವಾಗಿ ಮತ್ತು ಎಂದೆಂದಿಗೂ....... ಬದುಕಬೇಕು!

ಕೊನೆಯದಾಗಿ, ಈ ಅಭ್ಯಾಸದಲ್ಲಿ ನಿಮಗೆ ತಿಳಿದಿದ್ದರೆ ಒಂದು ಪ್ರಶ್ನೆಗೆ ಉತ್ತರವನ್ನು ನೀಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ, ಈ ಪ್ರಶ್ನೆಯನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಜ್ಞಾನೋಕ್ತಿಗಳು 30:4**

**"ಆಕಾಶಕ್ಕೆ ಏರಿ ಇಳಿದಿರುವವನಾರು? ಮುಷ್ಟಿಯಲ್ಲಿ ಗಾಳಿಯನ್ನು ಕೂಡಿಸಿರುವವರು ಯಾರು? ತನ್ನ ಬಟ್ಟೆಯಲ್ಲಿ ನೀರನ್ನು ಮೂಟೆಕಟ್ಟಿರುವವರು ಯಾರು? ಭೂಮಿಯ ಎಲ್ಲೆಗಳನ್ನೆಲ್ಲಾ ಸ್ಥಾಪಿಸಿರುವವರು ಯಾರು? ಅವನ ಹೆಸರೇನು? ಅವನ ಮಗನ ಹೆಸರೇನು? ನೀನೇ ಬಲ್ಲವನು."**



ಹೌದು **ಎಂತಹ ಪ್ರಶ್ನೆ!**

**ಇಲ್ಲಿ ಎಷ್ಟು ಜನರನ್ನು ಕುರಿತು ಮಾತನಾಡುತ್ತದೆ?**

**ಇಲ್ಲಿ ಮೂರು ಜನರ ಬಗ್ಗೆಯೇ???**

ಇಲ್ಲ! ಇಲ್ಲಿ ಇಬ್ಬರನ್ನು ಕುರಿತು ಮಾತನಾಡುತ್ತದೆ ಮತ್ತು ಪ್ರಶ್ನಿಸುವುದೇನೆಂದರೆ –

**...............ಆತನ ..........ಹೆಸರೇನು??**

**ಮತ್ತು ಆತನ............. ಮಗನ ಹೆಸರೇನು??**

**ನಮಗೆ ಗೊತ್ತೇ?** **ಓಹ್! ನಮಗೆ ಗೊತ್ತಿದೆ!**

**"ಆತನ ಹೆಸರು".... ಮಹಾ ಸರ್ವಶಕ್ತನಾದ ಯೆಹೋವನು.**

**....ಮತ್ತು "ಆತನ ಮಗನ ಹೆಸರು"..... ಕರ್ತನಾದ ಯೇಸು ಕ್ರಿಸ್ತನು**

**ಆತನ ಕೊನೆಯಿಲ್ಲದ ದಯೆ ಮತ್ತು ಕೃಪೆಯಿಂದ ಇಂದು ನಾವು ಆತನನ್ನು ತಿಳಿಯುವಂತೆ ನಮ್ಮನ್ನು ಆಯ್ದುಕೊಂಡಿದ್ದಾರೆ!!**

ಮತ್ತು ನಮ್ಮ ತ್ರೈಯೇಕತ್ವದ ಅಭ್ಯಾಸವು ಇಲ್ಲಿಗೆ ಕೊನೆಗೊಳ್ಳುತ್ತದೆ

ಸತ್ಯವೇದದಲ್ಲೇ ಕಾಣದಿರುವ ಉಪದೇಶ ಮತ್ತು ಬೋಧನೆ!
ಆದರೆ "ಕರ್ತನ ಪುಸ್ತಕವನ್ನು" ಹುಡುಕಿದ ಮೇಲೆ

**ಎಂತಹ ದೊಡ್ಡ ಸತ್ಯವನ್ನು ನಾವು ಕಂಡು ಹಿಡಿದಿದ್ದೇವೆ!!**


........"ಒಬ್ಬನೇ ನಿಜದೇವರು,"

........ಆತನು ಮೊದಲ ನೇರವಾದ ಸೃಷ್ಟಿ ಮತ್ತು ಒಬ್ಬನೇ ಮಗನು,

........ಮತ್ತು ಆತನ ಪವಿತ್ರಾತ್ಮವನ್ನು ಕುರಿತ ಜ್ಞಾನವನ್ನು ಇಂದು ನಾವು ಕಂಡು ಹಿಡಿದಿದ್ದೇವೆ..


ಹೌದು! ನಾವು ಇದನ್ನು ನಂಬುತ್ತೇವೆ ಏಕೆಂದರೆ ನಾವು ಆತನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

"ನಿನ್ನ ವಾಕ್ಯವೇ ಸತ್ಯವು."



ಆಮೆನ್

For Private Circulation Only




NOT FOR SALE

For more Subjects contact: MESSENGERS OF CHRIST  E-mail: thekingdom1_6@yahoo.com